ಕಲ್ಯಾಣಕಿರಣ

ಸೆಪ್ಟೆಂಬರ್, ೧೯೯೧



ಕಲ್ಯಾಣ ಕಿರಣ

ಮಾಸ ಪತ್ರಿಕೆ, ಸೆಪ್ಟಂಬರ್ ೧೯೯೧, ಬಿಡಿ ಸಂಚಿಕೆ ೩ ರೂ.

ಸಂಪುಟ : 20   ಸಂಚಿಕೆ : 5   ಬಸವ ಶಕೆ : 886

ವಾರ್ಷಿಕ ಚಂದಾ : 30 ರೂ.   ಆಜೀವ ಸದಸ್ಯತ್ವ : 300 ರೂ.

ಲೇಖನಗಳು   ಕಿ ರ ಣ ಗ ನ್ನ ಡಿ   ಲೇಖಕರು   ಪು.ಸಂಖ್ಯೆ

ಬೆಂಗಳೂರು ವಿಳಾಸ : **ಕಲ್ಯಾಣ ಕಿರಣ ಮಾಸಪತ್ರಿಕೆ** ದೂರವಾಣಿ : 325335
ಬಸವಮಂಟಪ, 2035, 2ನೇ ಬ್ಲಾಕು, 20ನೆಯ ಮುಖ್ಯ ರಸ್ತೆ, ರಾಜಾಜಿನಗರ, ಬೆಂಗಳೂರು–10

ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ ಲಿಂಗವ ನೆನೆವಡೆ
ತಪ್ಪುವವು ಅಪಮೃತ್ಯು ಕಾಲ ಕರ್ಮಂಗಳಯ್ಯ
ದೇವ ಪೂಜೆಯು ಮಾಟ ದುರಿತ ಬಂಧನದೋಟ
ಶಂಭು ನಿಮ್ಮಯ ನೋಟ ಹೆರೆ ಹಿಂಗದ ಕಣ್ ಬೇಟ
ಸದಾ ಸನ್ನಿಹಿತವಾಗಿ ಶರಣೆಂಬುವುದು, ನಂಬುವುದು.
ಜಂಗಮಾರ್ಚನೆಯು ಮಾಟ ಕೂಡಲ ಸಂಗನ ಕೂಟ

—ವಿಶ್ವಗುರು ಬಸವಣ್ಣ

ಕಲ್ಯಾಣ ಕಿರಣ

ಸಂಪುಟ : 20   ಸಂಚಿಕೆ : 5   ಸೆಪ್ಟಂಬರ್, 1991   ಬಸವ ಶಕೆ : 886

ಗುರುಚರಣಕೆ ನುಡಿನೈವೇದ್ಯ

ಅರವತ್ತು ತುಂಬಿದರೆ ಅರುಳು-ಮರುಳೆಂಬುವರು
ಎರಡನ್ನು ಮೀರಿದಿರಿ । ಅಪ್ಪಾಜಿ
ಅರಿವಿನಾನಂದದಲಿ ನಿಂದಿಹಿರಿ ॥ ॥೧॥
ಹೂವಿನ ಮೃದುಹೃದಯಿ ವಾತ್ಸಲ್ಯಧಾರೆಯಲಿ
ವಜ್ರದ ಕಟುಹೃದಯಿ ತತ್ತ್ವದಲಿ । ಅಪ್ಪಾಜಿ
ನ್ಯಾಯ-ನೈಷ್ಠುರ್ಯದ ಸತ್ಯವಾದಿ ॥ ॥೨॥
ಸ್ತ್ರೀ ಕುಲದ ಹಿರಿಮೆಯ ಲೋಕಕ್ಕೆ ತೋರಿದಿರಿ
ಸ್ತ್ರೀ ಜಗದ್ಗುರು ಪೀಠವನ್ನು ಸ್ಥಾಪಿಸಿ । ಅಪ್ಪಾಜಿ
ಸ್ತ್ರೀ ಗುರುವ ಜಗಕ್ಕೆ ನೀಡಿದಿರಿ ॥ ॥೩॥
ಮಾತಾಜಿಯವರನ್ನು ಗುರುವಾಗಿ ಮಾಡಿದಿರಿ
ಬೆಳೆಸಿದರು ನಿಮ್ಮ ಕೀರ್ತಿಯನು ॥ ಅಪ್ಪಾಜಿ
ಅಮರಗೊಳಿಸಿದರು ನಿಮ್ಮ ಹೆಸರನ್ನು ॥ ॥೪॥
ದೀಕ್ಷೆಯ ಗುರುವೆನಗೆ ಪೂಜ್ಯ ಮಾತಾಜಿ
ಶಿಕ್ಷಾಗುರು ಎನಗಾದಿರಿ ದಿವ್ಯ । ಅಪ್ಪಾಜಿ
ಮೋಕ್ಷಗುರು ಬಸವಣ್ಣ ಎಂದು ತಿಳಿಸಿದಿರಿ ॥ ॥೫॥
ಮನೆ ತೊರೆದು ಬಂದವರ ಮಕ್ಕಳಂತೆ ಸಲಹಿ
ಘನ ಆಶ್ರಯವಿತ್ತಿರಿ ಎಲ್ಲರಿಗೆ । ಅಪ್ಪಾಜಿ
ಮನೆ ಮರೆಸಿ ಆನಂದ ನೀಡಿದಿರಿ ॥ ॥೬॥
ಶರಣ ಮೇಳವು ನಡೆದು ಹರುಷಗೊಂಡರು ಜನರು
ನೆನಸುವರು ನಿಮ್ಮ ಹೆಸರನ್ನು । ಅಪ್ಪಾಜಿ
ಬಸವ ಧರ್ಮವನು ಉಳಿಸಿದರು ಎಂದು ॥ ॥೭॥
ಸಾಗಲಿ ನಿಮ್ಮ ಸೇವೆ ನೂರು ವರುಷವ ಮೀರಿ
ವರ್ಧಿಸಲಿ ಆರೋಗ್ಯ–ಆಯುಷ್ಯವು । ಅಪ್ಪಾಜಿ
ಮನಮುಟ್ಟಿ ಬೇಡುವೆ ಬಸವಣ್ಣನಿಗೆ ॥ ॥೮॥

—**ಸೋದರಿ ಅಕ್ಕಮಹಾದೇವಿ ,** (ಕುಂದಗೋಳ)



ಅಭಿವ್ಯಕ್ತಿ ಸ್ವಾತಂತ್ರ್ಯ

★ ಸ್ವಾತಂತ್ರ್ಯ ಅಮೂಲ್ಯವಾದುದೆಂಬುದು ನಿಜ ; ಆದ್ದರಿಂದಲೇ ಅದಕ್ಕೆ ಮಿತಿ ಇರಬೇಕು. ಎನ್ನುವುದು.

—ಎಡ್ಮಂಡ್ ಬರ್ಕ್

★ ಸ್ವಾತಂತ್ರ್ಯವೆಂದರೆ ಹೊಣೆಗಾರಿಕೆ, ಆದ್ದರಿಂದಲೇ ಅನೇಕರು ಅದಕ್ಕೆ ಅಂಜುವುದು !

—ಬರ್ನಾರ್ಡ್ ಶಾ

★ ಪರಮಾವಧಿ ಸ್ವಾತಂತ್ರ್ಯ ನ್ಯಾಯವನ್ನೇ ಅಪಹಾಸ್ಯ ಮಾಡುತ್ತದೆ.

—ಆಲ್ಬರ್ಟ್ ಕ್ಯಾಮಸ್

★ ಲೇಖನ ಸ್ವಾತಂತ್ರ್ಯವು ತಾನೇ ಒಂದು ಗುರಿಯಲ್ಲ, ಕೇವಲ ಸಾಧನ ಮಾತ್ರ.

—ಫೆಲಿಕ್ಸ್ ಫ್ರಾಂಕ್‌ಫರ್ಟರ್

ಬೆಂಗಳೂರಿನ ಬಸವ ಸಮಿತಿಯು **'ಬಸವ ಪುರಸ್ಕಾರ'** ವನ್ನು ಡಾ॥ ಪಿ. ವಿ. ನಾರಾಯಣರ ವಚನ-ನಿರ್ವಚನ ಕೃತಿಗೆ ಕೊಟ್ಟಿತು. ದಿ. 5-7-1991 ರ ಕನ್ನಡ ಪ್ರಭಾದ ಜನನಾಡಿಯಲ್ಲಿ ಬಿ. ವಿ. ಮಲ್ಲಿಕಾರ್ಜುನಯ್ಯ ಎನ್ನುವವರು "ಕುಚೋದ್ಯದ ಕೃತಿಗೆ ಬಸವ ಪುರಸ್ಕಾರ" ಎಂಬ ಶೀರ್ಷಿಕೆಯ ಅಡಿಯಲ್ಲಿ ಆಕ್ಷೇಪ ವ್ಯಕ್ತಪಡಿಸಿದರು. ಈ ಆಕ್ಷೇಪ ಬಹಳ ಜನರ ಗಮನ ಸೆಳೆಯಿತು. ಕಳೆದ ಕಲ್ಯಾಣ ಕಿರಣದಲ್ಲಿ ನಾನು ಬರೆದಂತೆ, ಲಿಖಿತ ರೂಪದಲ್ಲಿ ಪತ್ರವನ್ನು ಕಳಿಸಿ, ಪುರಸ್ಕಾರ ನೀಡಿಕೆ ತಡೆಹಿಡಿಯಲು ಕೋರಿದೆವು. ಬಸವ ಸಮಿತಿಯಿಂದ ಬುಧವಾರ ಜುಲೈ 17ರ ಪತ್ರಿಕೆಯಲ್ಲಿ ತಡೆಹಿಡಿಯಲಾದ ಪ್ರಕಟಣೆ ಮುದ್ರಣಗೊಂಡಿತು.

ಶ್ರೀ ಡಾ॥ ಪಿ. ವಿ. ನಾರಾಯಣರು ಕೊಟ್ಟ ಒಂದು ಹೇಳಿಕೆ "ಪುರಸ್ಕಾರ ರದ್ದು: ವೈಚಾರಿಕತೆಯ ಮೇಲೆ ಹಲ್ಲೆ" ಎಂಬ ಶೀರ್ಷಿಕೆಯ ಅಡಿಯಲ್ಲಿ ಪ್ರಕಟವಾಯಿತು. ಅದರ ಪೂರ್ಣ ವಿವರ ಹೀಗಿದೆ.

ಪುರಸ್ಕಾರ ರದ್ದು ; ವೈಚಾರಿಕತೆಯ ಮೇಲೆ ಹಲ್ಲೆ

ಮಾನ್ಯರೆ,

ಈಚೆಗೆ ನನ್ನ ಕೃತಿ 'ವಚನ-ನಿರ್ವಚನ'ಕ್ಕೆ ಬಸವ ಪುರಸ್ಕಾರವನ್ನು ನೀಡಲಾಗಿದೆಯೆಂದು ಬೆಂಗಳೂರಿನ ಬಸವ ಸಮಿತಿಯ ಆಡಳಿತ ವರ್ಗ ಪ್ರಕಟಿಸಿತ್ತು. ಆದರೆ ಆ ಕೃತಿಯಲ್ಲಿ ಆಕ್ಷೇಪಾರ್ಹ ಅಭಿಪ್ರಾಯಗಳಿವೆಯಾದ್ದರಿಂದ ಬಸವ ಪುರಸ್ಕಾರವನ್ನು ಹಿಂತೆಗೆದುಕೊಳ್ಳಬೇಕೆಂದು ಬಿ. ವಿ. ಮಲ್ಲಿಕಾರ್ಜುನಯ್ಯ ಎಂಬುವವರು ತಮ್ಮ ಪತ್ರಿಕೆಯ 'ಜನನಾಡಿ' ವಿಭಾಗದಲ್ಲಿ ಪ್ರತಿಪಾದಿಸಿದ್ದರು. (3-7-91)

ಆ ಪತ್ರದೊಡನೆ ಮತ್ತೂ ಕೆಲವರಿಂದ ಅಂತಹ ಅಭಿಪ್ರಾಯಗಳು ಬಂದಿರುವುದರಿಂದ 'ವಚನ-ನಿರ್ವಚನ'ಕ್ಕೆಂದು ಪ್ರಕಟಿಸಲಾದ ಬಸವ ಪುರಸ್ಕಾರವನ್ನು ತಡೆಹಿಡಿದಿರುವುದಾಗಿ ಬಸವ ಸಮಿತಿಯ ಆಡಳಿತವು ಈಗ ಮತ್ತೊಂದು ಪತ್ರಿಕಾ ಹೇಳಿಕೆಯನ್ನು ನೀಡಿದೆ. ಈ ಬಗ್ಗೆ ನನ್ನ ಅನಿಸಿಕೆಗಳನ್ನು ತಿಳಿಸುತ್ತಿದ್ದೇನೆ.

1. ನನ್ನ ಅಭಿಪ್ರಾಯಗಳು ತಮ್ಮ ನಂಬಿಕೆಗಳಿಗೆ ಸರಿಹೊಂದಲಾರವೆಂಬ ಕಾರಣಕ್ಕಾಗಿ ಆಕ್ಷೇಪಾರ್ಹವೆಂದು ಈ ಕೆಲ ಓದುಗರ ಅನಿಸಿಕೆಯಾಗಿರಬಹುದು. ಆದರೆ ಸಿಕ್ಕ ಸಾಕ್ಷ್ಯಾಧಾರಗಳನ್ನೆಲ್ಲ ಪರಿಶೀಲಿಸಿ ವಿದ್ವಾಂಸನೊಬ್ಬ ನಿಷ್ಪಕ್ಷಪಾತ ದೃಷ್ಟಿಯಿಂದ ಒಂದು ತೀರ್ಮಾನಕ್ಕೆ ಬಂದಾಗ ಅದನ್ನು ವಿದ್ವನ್ಮಾರ್ಗದಿಂದ ವಿರೋಧಿಸಬೇಕೇ ಹೊರತು ಕೇವಲ ಅಭಿಪ್ರಾಯದ ಮಟ್ಟದಲ್ಲಲ್ಲ.

   ನಾನು ಕಳೆದ ಇಪ್ಪತ್ತು ವರ್ಷಗಳಿಗಿಂತಲೂ ಹೆಚ್ಚಿನ ಕಾಲದಿಂದ ವಚನ ಚಳವಳಿಯ ಬಗ್ಗೆ ಅಪಾರ ಹೆಮ್ಮೆ, ವಚನಕಾರರ ಬಗ್ಗೆ ಸಂಪೂರ್ಣ ಗೌರವಗಳಿಂದ ವಚನಸಾಹಿತ್ಯವನ್ನು ಅಭ್ಯಾಸ ಮಾಡುತ್ತ, ಅದರ ಬಗ್ಗೆ ಬರೆಯುತ್ತ ಬಂದಿದ್ದೇನೆ. ಪ್ರಾಮಾಣಿಕವಾದ ಅಧ್ಯಯನದ ಫಲವಾದ ತೀರ್ಮಾನಗಳಿಗೆ ನಾನು ಈಗಲೂ ಬದ್ಧನಾಗಿದ್ದೇನೆ; ಅವುಗಳಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ಅವುಗಳನ್ನು ವಿದ್ವತ್ತಿನ ಮಾರ್ಗದಲ್ಲಿ ವಿರೋಧಿಸಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಲು ಎಲ್ಲರಿಗೂ ಸ್ವಾತಂತ್ರ್ಯವಿದೆ

2. ಕೆಲವು ಓದುಗರ ಅಭಿಪ್ರಾಯಗಳಿಗೆ 'ಮಣಿದು' ಬಸವ ಸಮಿತಿಯು ತಾನೇ ಕೆಲ ದಿನಗಳ ಹಿಂದೆ ಪ್ರಕಟಿಸಿದ್ದ ಪುರಸ್ಕಾರವನ್ನು ಈಗ ತಡೆಹಿಡಿಯುವುದರ ಅಥವಾ ರದ್ದುಪಡಿಸುವುದರ ಹಿಂದಿನ ವಿವೇಕವನ್ನು ನಾನೀಗ ಪ್ರಶ್ನಿಸಬೇಕಾಗಿದೆ. ಯಾವ

ವೈಚಾಕರಿತೆಯನ್ನು ಬಸವಾದಿಗಳು ಪ್ರತಿಪಾದಿಸಿದರೋ ಆ ಮೌಲ್ಯಕ್ಕೆ ಬದ್ಧವಾಗಿರಬೇಕಾದ ಬಸವ ಸಮಿತಿಯು ಕೆಲವರ ಅಭಿಪ್ರಾಯಗಳಿಗೆ ಮಣೆ ಹಾಕಿ ತನ್ನ ತೀರ್ಮಾನಕ್ಕೆ ತಾನೇ ವಿರೋಧವಾಗಿ ನಡೆಯುವುದು ಸರಿಯೇ?

3. ಪುರಸ್ಕಾರವನ್ನು ನೀಡಲು ಶಿಫಾರಸು ಮಾಡುವುದಕ್ಕಾಗಿ ಬಸವ ಸಮಿತಿಯು ಒಂದು ಆಯ್ಕೆ ಸಮಿತಿಯನ್ನು ನೇಮಿಸಿದ್ದಿರಬೇಕು. ಆ ಸಮಿತಿಯ ಸದಸ್ಯರಾರೋ ತಿಳಿಯದು. ಅವರು ಈಗ ಬಹಿರಂಗಕ್ಕೆ ಬಂದು ತಮ್ಮ ಆಯ್ಕೆಯನ್ನು ಮೊದಲು ಒಪ್ಪಿ ಈಗ ತಿರಸ್ಕರಿಸುತ್ತಿರುವ ಬಸವ ಸಮಿತಿಯ ವಿರುದ್ಧ ಪ್ರತಿಭಟಿಸುವರೆಂದು ನಾನು ನಿರೀಕ್ಷಿಸಬಹುದೇ ?

4. ನಮ್ಮ ನಾಡಿನ ಪ್ರಜ್ಞಾವಂತ ಜನ ಇಂತಹ ವೈಚಾರಿಕತೆಯ ಮೇಲಿನ ಹಲ್ಲೆಯನ್ನು ತೀವ್ರವಾಗಿ ಖಂಡಿಸಬೇಕು. ಬಸವ ಸಮಿತಿಯು ನನಗೆ ಅಪಾರ ಮಾನಸಿಕ ಕ್ಲೇಶವನ್ನುಂಟುಮಾಡಿದೆ. ಪುರಸ್ಕಾರವನ್ನು ನನ್ನ ಪುಸ್ತಕಕ್ಕೆ ನೀಡದೆ ಇದ್ದಿದ್ದರೆ ಯಾರೇನೂ ತಕರಾರು ಮಾಡುತ್ತಿರಲಿಲ್ಲ. ಆದರೆ ಕೆಲವೇ ದಿನಗಳಲ್ಲಿ ತನ್ನ ತೀರ್ಮಾನವನ್ನು ಮುರಿಯುವ ಅದರ ಹೊಣೆಗೇಡಿತನವನ್ನು ವಿಚಾರವಂತರು ಪ್ರತಿಭಟಿಸಬೇಕೆಂದು ನನ್ನ ಪ್ರಾರ್ಥನೆ.

—**ಪಿ. ವಿ. ನಾರಾಯಣ**, ಬೆಂಗಳೂರು.

ಡಾ॥ ನಾರಾಯಣರ ಪತ್ರದಲ್ಲಿ ಕೊಟ್ಟಿರುವ ಕ್ರಮಸಂಖ್ಯೆ ಉತ್ತರಿಸಲು ಅನುಕೂಲವಾಗಲೆಂದು ನಾನು ಕೊಟ್ಟಿರುವ ಸಂಖ್ಯೆ ಎಂಬುದನ್ನು ಓದುಗರ ಗಮನಕ್ಕೆ ತರುತ್ತೇನೆ.

1. ಡಾ॥ ನಾರಾಯಣರ ಅಭಿಪ್ರಾಯಕ್ಕೆ ನಮ್ಮ ನಂಬಿಕೆಗಳು ಸರಿಹೊಂದಲಾರವೆಂದು ನಾವು ಆಕ್ಷೇಪಾರ್ಹ ಎನ್ನುತ್ತಲಿಲ್ಲ. ಅವರ ಅಧ್ಯಯನ ಅಪೂರ್ಣ, ಅವರ ಅಭಿಪ್ರಾಯ ಅಪಕ್ವ ಹೇಗೆ ಎಂಬುದನ್ನು ಸಾಧಾರ ಪೂರ್ವಕವಾಗಿ ವಚನಗಳ ಆಧಾರದಲ್ಲೇ ನಾನು ಪ್ರತಿಪಾದಿಸಿರುವುದನ್ನು ಓದುಗರು ಗಮನಿಸಬೇಕು. ಆದ್ದರಿಂದ ನಾರಾಯಣರು ಅಪೇಕ್ಷಿಸಿದಂತೆ ವಿದ್ವನ್ಮಾರ್ಗದಿಂದಲೇ ಅವರ ಬರಹದಲ್ಲಿನ ದೋಷಗಳನ್ನು ತೋರಿಸಲಾಗಿದೆ. ವಚನ ವಾಙ್ಮಯದ ಬಗ್ಗೆ ನಾರಾಯಣರಿಗೆ ಅಭಿಮಾನ ಇರಬಹುದು. ಆದರೆ ಕತ್ತಿಗಿಂತಲೂ ಶಕ್ತಿಶಾಲಿಯಾದ ಲೇಖನಿಯನ್ನು ಪ್ರಯೋಗಿಸುವಾಗ ಬಹಳಷ್ಟು ಎಚ್ಚರವಹಿಸಬೇಕು. ಕತ್ತಿ, ಹೊಡಿಸಿಕೊಂಡವನಿಗೆ ಮಾತ್ರ ಗಾಯವನ್ನು-ನೋವನ್ನು ಉಂಟು ಮಾಡಿದರೆ ಲೇಖನಿ ಬಹುಜನರನ್ನು ಘಾಸಿಗೊಳಿಸುತ್ತದೆ.

ಡಾ॥ ನಾರಾಯಣರು, **ತಮ್ಮದು ಅಭಿಪ್ರಾಯ, ವಿರೋಧಿಸುವವರದು ನಂಬಿಕೆಗಳು** ಎನ್ನುವಲ್ಲಿ ಸಹ ಒಂದು ರೀತಿಯ ಅಹಂ ಅನ್ನೇ ಪ್ರದರ್ಶಿ

ಸಿದ್ದಾರೆ. ಧಾರ್ಮಿಕರು ಬರೀ ನಂಬಿಕೆಗಳ ತಳಹದಿಯ ಮೇಲೆ ವಿರೋಧಿಸುವರು ಎಂಬ ವ್ಯಂಗ್ಯಭಾವವೂ ಇಲ್ಲಿ ಹುದುಗಿಕೊಂಡಿದೆ. ನಂಬಿಕೆಗೆ ಬೆಲೆಗೊಟ್ಟು ಸತ್ಯವನ್ನು ವಿರೋಧಿಸುವವರು ನಾವಲ್ಲ. ನನ್ನ ಬರಹದಲ್ಲಿ ಸಾಧಾರಪೂರ್ವಕವಾಗಿ ವಿಷಯಗಳನ್ನು ಮಂಡಿಸಿರುವುದನ್ನು ಓದುಗರೇ ಅರಿಯಬಹುದು.

2. ಕೆಲವು ಓದುಗರ ಅಭಿಪ್ರಾಯಗಳಿಗೆ "**ಮಣಿದು**" ಬಸವ ಸಮಿತಿಯು ಪುರಸ್ಕಾರವನ್ನು ತಡೆಹಿಡಿಯುವದರ ಹಿಂದಿನ ವಿವೇಕವನ್ನು ನಾನೀಗ ಪ್ರಶ್ನಿಸಬೇಕಾಗಿದೆ ಎಂದಿದ್ದಾರೆ ನಾರಾಯಣ ಅವರು.

ಪುಸ್ತಕವನ್ನು ಓದಿಲ್ಲದಿದ್ದಾಗ ನಾವು ಕೇವಲ ತಡೆಹಿಡಿಯಿರಿ ಎಂದು ಕೋರಿದ್ದೆವು, ಪುಸ್ತಕವನ್ನು ಸಮಗ್ರವಾಗಿ ಅದೂ ಪ್ರಾಂಜಲ ಮನಸ್ಸಿನಿಂದ ಓದಿ, ವಿವರವಾದ ವಿಮರ್ಶೆ ಬರೆದು ಪುರಸ್ಕಾರ ನೀಡಿಕೆಯನ್ನು ರದ್ದುಪಡಿಸಲು ಕೋರುತ್ತೇವೆ. ಶರಣರನ್ನು ಸರಿಯಾಗಿ ಅಂದರೆ ಅವರಿದ್ದಂತೆ, ಇತಿಹಾಸಕ್ಕೆ ಅಪಚಾರವಾಗದಂತೆ ಚಿತ್ರಿಸಲು ವಿಫಲವಾಗಿರುವ ಈ ಕೃತಿಗೆ ಪುರಸ್ಕಾರ ಕೊಟ್ಟಿದ್ದೇ ಆದರೆ ಆಗ ಬಸವ ಸಮಿತಿಯು ಮತ್ತು ಆಯ್ಕೆ ಸಮಿತಿಯ ವಿವೇಕವನ್ನು ನಾವು ಪ್ರಶ್ನಿಸುವುದು ಅನಿವಾರ್ಯವಾಗುತ್ತದೆ. ಏಕೆಂದರೆ **ಅಭಿಮಾನದಿಂದ ಕುರುಡಾಗಿ ವರ್ತಿಸುವುದು ಎಷ್ಟು ಖಂಡನಾರ್ಹವೋ ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಅತಿರೇಕದಿಂದ ಬರೆಯುವುದೂ ಪ್ರಶ್ನಾರ್ಹವೆ !**

3. ಪುರಸ್ಕಾರವನ್ನು ನೀಡಲು ಆಯ್ಕೆ ಸಮಿತಿ ಇದ್ದುದೂ ನಿಜ; ಬಹುಶಃ ಅವರಾದರೂ ಮೇಲು ಮೇಲೇ ಕಣ್ಣಾಡಿಸಿದ್ದಾರೆ ಅಂತ ತೋರುತ್ತದೆ. ಇದೂ ಒಂದು ದೃಷ್ಟಿಯಿಂದ ಡಾ॥ ನಾರಾಯಣರ ಮೇಲಿರುವ ವಿಶ್ವಾಸಕ್ಕೆ ಮಣೆ ಹಾಕಿಯೇ ಕೈಗೊಂಡ ತೀರ್ಮಾನವಿರಬಹುದು. ನಂತರ ಒಳಗಿನ ವಿಷಯಗಳು ಹೊರಬಂದ ಮೇಲೆ ಎಲ್ಲರಿಗೂ ಮುಜುಗರವೆ.

ಮೊದಲು ನಿರ್ಲಕ್ಷ್ಯದಿಂದಲೇ ಪುಸ್ತಕವನ್ನು ಓದಿ, ತೀರ್ಪುಕೊಟ್ಟ ತಪ್ಪನ್ನು ಆಯ್ಕೆ ಸಮಿತಿಯು, ಅವರ ಮಾತಿನಲ್ಲಿ ವಿಶ್ವಾಸವಿಟ್ಟು ಪುರಸ್ಕಾರ ಘೋಷಿಸಿದ ತಪ್ಪನ್ನು ಬಸವ ಸಮಿತಿಯು ಮಾಡಿವೆ. ಆದರಿದು ಮೈಮರೆವಿನ ಕಾರಣ ಕ್ಷಮ್ಯ. ಪುಸ್ತಕದ ಒಳಗನ್ನು ಬಿಚ್ಚಿಟ್ಟ ಮೇಲೆಯೂ ಆಯ್ಕೆ ಸಮಿತಿ ಮತ್ತು ಬಸವ ಸಮಿತಿ ಪುರಸ್ಕಾರ ಕೊಟ್ಟರೆ ಅದು ಅಕ್ಷಮ್ಯ ಅಪರಾಧವಾಗುತ್ತದೆಯಷ್ಟೆ ?

4. ವೈಚಾರಿಕತೆಯ ಮೇಲಿನ ಹಲ್ಲೆ ಎಂದು ನಾರಾಯಣರು ದೂಷಿಸಿದ್ದಾರೆ. ವೈಚಾರಿಕತೆ ಎಂದರೆ ಮನಸ್ಸಿಗೆ ಬಂದಂತೆ ಬರೆಯುವುದೆ ? ಯಾರನ್ನು ಬೇಕಾದರೂ

ಕುರಿತು, ಏನು ಬೇಕಾದರೂ ಬರೆದು. ಅಭಿವ್ಯಕ್ತಿ ಸ್ವಾತಂತ್ರ್ಯ ಎನ್ನಲು ಬರುವುದೆ? ಒಬ್ಬ ಮಿಲಿಟರಿ ಅಧಿಕಾರಿಗೆ ಬಂದೂಕನ್ನು ಹೊಂದಲು, ಹಾರಿಸಲು ಅಧಿಕೃತ ಒಪ್ಪಿಗೆಯನ್ನೇ ಸರ್ಕಾರಕೊಟ್ಟಿದ್ದರೂ, ತನ್ನ ದೇಶದ ನಾಗರಿಕನೊಬ್ಬನನ್ನು ಅಥವಾ ಅಮಾಯಕನನ್ನು ಗುಂಡು ಹಾರಿಸಿ ಕೊಲ್ಲಲು ಸ್ವಾತಂತ್ರ್ಯವಿಲ್ಲ. ಅಷ್ಟರ ಮಟ್ಟಿಗೆ ಸ್ವಾತಂತ್ರ್ಯ **ಸೀಮಿತ** ಮತ್ತು **ನಿಯಂತ್ರಿತ.**

ಮಾನನಷ್ಟ ಮೊಕದ್ದಮೆಗೆ ಭಾರತದ ಸಂವಿಧಾನದಲ್ಲಿ ಅವಕಾಶವಿದೆ. ಇದರ ರ್ಥವೇನು ? ಅಭಿವ್ಯಕ್ತಿ ಸ್ವಾತಂತ್ರ್ಯವಿದೆ ಎಂದು ಯಾರ ಬಗ್ಗೆಯೋ ಏನನ್ನೋ ಆಡಲು, ಬರೆಯಲು ಬರದಷ್ಟೆ. ಅಭಿವ್ಯಕ್ತಿ ಸ್ವಾತಂತ್ರ್ಯ ತನ್ನ ವಿಚಾರವನ್ನು ಪ್ರತಿಪಾದಿಸಲು ಇರುವ ಒಂದು ಮಾಧ್ಯಮವೇ ಹೊರತು ಇನ್ನೊಬ್ಬರನ್ನು ಅವ ಹೇಳನ ಮಾಡಲು ಇರುವ ಸೌಲಭ್ಯವಲ್ಲ.

"ಬಸವ ಸಮಿತಿ ತಮಗೆ ಅಪಾರ ಮಾನಸಿಕ ಕ್ಲೇಶವನ್ನು ಉಂಟುಮಾಡಿದೆ." ಎಂದಿದ್ದಾರೆ ನಾರಾಯಣ ಅವರು. ಇದಕ್ಕಾಗಿ ನಾವೆಲ್ಲರೂ ವಿಷಾದಿಸುತ್ತೇವೆ. ಆದರೆನಾರಾಯಣ ಅವರಿಗೆ ಇರುವಂತೆ ನಮ್ಮಂತಹವರಿಗೂ, ಶರಣರ ಬಗ್ಗೆ ಅಪಾರ ಭಕ್ತಿ-ಅಭಿಮಾನ ಇರುವ ಅಸಂಖ್ಯಾತ ಜನರಿಗೂ ಮನಸ್ಸು ಅನ್ನು-ವುದೂ ಇರುತ್ತದೆ; ಅವರ ಮನಸ್ಸುಗಳಿಗೂ ಕ್ಲೇಶವಾಗುತ್ತದೆ ಎಂಬ ಅರಿವು ಡಾ॥ ನಾರಾಯಣರಂತಹ ಬರಹಗಾರರಿಗೆ ಇರುವುದು ಅಗತ್ಯವಿದೆ.

ತೀವ್ರವಾದ ವಿರೋಧ ಪ್ರಕಟಗೊಳ್ಳುವ ಮುನ್ನವೇ ಬಸವ ಸಮಿತಿಯು ಮುತ್ಸದ್ದಿತನವನ್ನು ಪ್ರದರ್ಶಿಸಿದ್ದು ಅಭಿನಂದನಾರ್ಹ. ಪುಸ್ತಕವನ್ನು ಕೂಲಂಕುಷವಾಗಿ ಪರಿಶೀಲಿಸದೆ ಪುರಸ್ಕಾರ ನೀಡುವ ಹೊಣೆಗೇಡಿತನವನ್ನು ಮೊದಲು ಬಸವ ಸಮಿತಿ ತೋರಿಸಿದರೂ, ಬೇಗನೆ ಎಚ್ಚರಗೊಂಡು ಹೊಣೆಗಾರಿಕೆಯನ್ನು ಪ್ರದರ್ಶಿಸಿದುದು ಗಮನಾರ್ಹ. ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಬಹಳ ಮಾತನಾಡುವವರು ಈ ಸಂಪಾದಕೀಯ ಬರಹದ ಆರಂಭದಲ್ಲಿ ಉಲ್ಲೇಖಿಸಿರುವ ತಿಳಿದವರ ಮಾತನ್ನು ನೆನಪಿಟ್ಟುಕೊಳ್ಳುವುದು ಒಳ್ಳೆಯದು.

—ಜಗದ್ಗುರು ಮಾತೆ ಮಹಾದೇವಿ

★ ★

ಇನ್ನೊಂದು ಪ್ರತಿಕ್ರಿಯೆ

ನನ್ನ ವಿಮರ್ಶಾತ್ಮಕ ಬರಹಕ್ಕೆ ಮೆಚ್ಚುಗೆ ಸೂಸಿ ಬಹಳ ಜನ ಪತ್ರ ಬರೆದಿದ್ದಾರೆ. ಚಿಕ್ಕಮಗಳೂರಿನ ಶ್ರೀ ಸೋಮಣ್ಣಯ್ಯನವರು ಒಂದು ಅಭಿಪ್ರಾಯ ಸೂಚಿಸಿದ್ದಾರೆ. ಕಲ್ಯಾಣಕಿರಣದಂತಹ ಮಾಸ ಪತ್ರಿಕೆಯಲ್ಲಿ ಕೀಳು ದರ್ಜೆ ವಿಮರ್ಶೆಗಾರರ ಬಗ್ಗೆ ಹೆಚ್ಚಿನ

ಪುಟಗಳನ್ನು ನೀಡಬಾರದು, ನಾಯಿಕೊಡೆಯಂತಿರುವ ಕೀಳು ಸಾಹಿತ್ಯ ತನ್ನಿಂದ ತಾನೇ ಸಾಯುತ್ತವೆ ಎಂದಿದ್ದಾರೆ.

ಈ ಸಲಹೆಗೆ ನನ್ನ ಅಭಿಪ್ರಾಯವೇನೆಂದರೆ, ನಾವು ಎಲ್ಲದರ ಬಗ್ಗೆಯೂ ಉದಾಸೀನತೆ ತಾಳಿ, ಸಾತ್ವಿಕತೆಯ ಸೋಗಿನಲ್ಲಿ ಕುಳಿತರೆ ಅದು ಹೇಡಿತನವಾಗುವುದು. ಟಿಕ್-20 ಮೇಲೆ 'ವಿಷ, ಎಚ್ಚರಿಕೆ' ಎಂದು ಇರುತ್ತದೆ. ಜನರೂ ಎಚ್ಚರವಾಗಿರುತ್ತಾರೆ. ಮಕ್ಕಳ ಕೈಗೆ ಸಿಗದಂತೆ ಪಾಲಕರು ಎಚ್ಚರವಹಿಸುತ್ತಾರೆ. ಗ್ಲೂಕೋಸ್ ದಲ್ಲಿ ವಿಷವು ಮಿಶ್ರಣವಾಗಿಬಿಟ್ಟಿದ್ದರೆ ! ಅದು ಎಷ್ಟು ಅಪಾಯಕಾರಿ ? ಸಂಶೋಧನೆಯ ಹೆಸರಿನಲ್ಲಿ ಮನಸ್ಸಿಗೆ ಬಂದಂತೆ ಬರೆದು, ಜನರ ಮನಸ್ಸಿನಲ್ಲಿ ತಪ್ಪು ಕಲ್ಪನೆ ಮೂಡಿಸಿಬಿಟ್ಟರೆ ಅದರ ನಿವಾರಣೆ ಎಷ್ಟು ಕಷ್ಟಕರ. ಆ ಬಗ್ಗೆ ಎಚ್ಚರಿಕೆ ನೀಡುವುದು ತುಂಬಾ ಅಗತ್ಯವಿರುತ್ತದೆ.

ಕಾಲು ಮುಳ್ಳನ್ನು ತುಳಿಯಿತು ಎಂದುಕೊಳ್ಳಿರಿ. ಅಲ್ಲಿ ಜೀವಂತಿಕೆ ಇದ್ದರೆ ನೋವು ಎನಿಸುತ್ತದೆ. ತಕ್ಷಣ ಆ ಮುಳ್ಳು ಕೀಳಲು ಕೈಯು ಮುಂದಾಗುತ್ತದೆ. ಹಾಗೆಯೇ ಸಮಾಜವು ಜೀವಂತವಾಗಿದ್ದರೆ ಶರಣರಿಗೆ, ಶರಣರ ಸಾಹಿತ್ಯಕ್ಕೆ ಅವಹೇಳನದ ಮುಳ್ಳು ಚುಚ್ಚುತ್ತಲೇ ಸಮಾಜ ಪ್ರತಿಕ್ರಿಯೆ ತೋರಿಸುತ್ತದೆ. ಆದ್ದರಿಂದ ಪ್ರತಿಕ್ರಿಯೆ ತೋರಿಸುವುದೇ ಜೀವಂತಿಕೆಯ ಲಕ್ಷಣ ಎಂಬುದನ್ನು ಮನಗಾಣಬೇಕು.

⚜ ⚜ ⚜ ⚜

ಶಿವಾಚಾರದ (ಸಮತಾವಾದ) ನಿಂದೆಯು ಕೇಳದಿಹುದೇ ಗಣಾಚಾರ, ಶಿವ ಶರಣರ ನಿಂದೆಯು ಕೇಳದಿಹುದೇ ಗಣಾಚಾರ. ಈ ಗಣಾಚಾರವು ಪಂಚ ಆಚಾರಗಳಲ್ಲಿ ಒಂದು. ಅಸತ್ಯದ ವಿರುದ್ಧ ಧ್ವನಿ ಎತ್ತದಿದ್ದರೆ ತತ್ತ್ವನಿಷ್ಠೆ ಉಳಿಯುವುದೆ? ಅಸತ್ಯವು ಬಹಳ ದಿನ ಉಳಿಯಲ್ಲ ತನ್ನಿಂದ ತಾನೇ ಸಾಯುವುದು ಎಂದು ಉದಾಸೀನ ತಾಳಿದರೆ, ಅದೇ ಪಾರ್ಥೇನಿಯಮ್‌ನಂತೆ ವ್ಯಾಪಿಸಿಕೊಂಡು ನಿಜ ತತ್ತ್ವದ ಬೆಳೆಯನ್ನೆ ತಿಂದು ಹಾಕುವ ಸಂಭವವಿರುತ್ತದೆ.

★ ★ ★ ★

ಯಾರಾದರೂ ವೈಯಕ್ತಿಕವಾಗಿ ನಿಂದಿಸಿದರೆ ನಾವು ಮೌನವಾಗಿದ್ದರೆ ಅದು ನಮ್ಮ ಚಿತ್ತ ಸಮತೆಯನ್ನು, ಸ್ಥಿತ ಪ್ರಜ್ಞತ್ವವನ್ನು ತೋರಿಸುತ್ತದೆ. ವೈಯಕ್ತಿಕ ಕೀರ್ತಿ ಹೊಂದಲು ನಾವು ಹುಯಿಲೆಬ್ಬಿಸಬೇಕಾಗಿಲ್ಲ. ಆದರೆ ತತ್ತ್ವಕ್ಕೆ, ನಾವು ಮಾದರಿಯಾಗಿಟ್ಟುಕೊಂಡ ಮಹಾಪುರುಷರಿಗೆ, ಆದರ್ಶ ಧ್ಯೇಯಕ್ಕೆ ಅವಹೇಳನವಾದಾಗ ಸಹಿಸಿಕೊಳ್ಳುವುದು ಹೇಡಿತನವಾಗುತ್ತದೆ. ಆ ಮಹಾಚೇತನಗಳನ್ನು ಸತ್ಯಕ್ಕೆ ದೂರವಾಗಿ, ವಿಕೃತವಾಗಿ ಚಿತ್ರಿಸಿದಾಗ ಸಹಿಸಿಕೊಳ್ಳುವುದಂತೂ ಪರಮಪಾತಕವಾಗುತ್ತದೆ.

—ಮಾತಾಜಿ

'ವಚನ-ನಿರ್ವಚನ' ಕೃತಿಯ ವಿಮರ್ಶೆ

—ಮಾತಾಜಿ

(ಜುಲೈ-ಆಗಸ್ಟ್ ಸಂಚಿಕೆಯಿಂದ ಮುಂದುವರಿದಿದೆ)

ಅಧ್ಯಕ್ಷತೆ, ಪೀಠ ಮತ್ತು ವಚನ ರಚನೆ

ಕಾಲಜ್ಞಾನ ವಚನಗಳಲ್ಲಿ, ಪ್ರಭು ನಾಮ ಸಂವತ್ಸರದ ಚೈತ್ರಶುದ್ಧ ಪಾಡ್ಯ ಸೋಮವಾರ ರೇವತಿ ನಕ್ಷತ್ರದಲ್ಲಿ ಅಲ್ಲಮಪ್ರಭುದೇವರು ಶೂನ್ಯ ಸಿಂಹಾಸನ ಆರೋಹಣ ಮಾಡಿದರೆಂದು ಉಲ್ಲೇಖವಿದೆ. ಕೊಡೇಕಲ್‌ನವರ ಕಾಲಜ್ಞಾನ, ಪುಟ 250 ರಲ್ಲಿ ಪ್ರಸ್ತಾಪವಾಗಿದೆ. ಕ್ರೋಧಿನಾಮ ಸಂವತ್ಸರ (ಕ್ರಿ. ಶ. 1156) ರಲ್ಲಿ ಪ್ರಭುವಿನ ಪೀಠಾರೋಹಣವಾದ್ದರಿಂದ ಶರಣರು ಅದನ್ನು ಪ್ರಭು ನಾಮ ಸಂವತ್ಸರ ಎಂದೇ ಕರೆದುಕೊಂಡಿದ್ದಾರೆ. [ಶೂನ್ಯ ಪೀಠಾಧೀಶ ಪ್ರಭುದೇವರ ಜಯಂತಿಯನ್ನು ಇಂದಿಗೂ ಯುಗಾದಿ ಪಾಡ್ಯದಂದೇ ಆಚರಿಸಿಕೊಂಡು ಬರುತ್ತಿರುವುದೂ ಗಮನಾರ್ಹವಾದುದು.] ಪ್ರಭುದೇವರ ಅಧ್ಯಕ್ಷತೆಯಲ್ಲಿಯೇ ದಿನ ನಿತ್ಯದ ಅನುಭವಗೋಷ್ಠಿ ನಡೆಯುತ್ತಿದುದು.

ವಚನಗಳು ತಮ್ಮಂತರಂಗದಲ್ಲಿ ಸ್ಫುರಿಸಿದ ಭಾವನೆಗಳಿಗೆ ಶರಣರು ಕೊಟ್ಟ ಅಭಿವ್ಯಕ್ತಿ ತಾನೆ ? ಅವರು ಅವನ್ನು ಗಿರಿ, ವನಗಳಲ್ಲಿ ಸಂಚರಿಸುವಾಗ ಬರೆದಿರಬಹುದು. ಪೂಜೆ-ಶಿವಯೋಗದಲ್ಲಿ ನಿರತರಾದಾಗ ಬರೆದಿರಬಹುದು. ಜನರೊಡನೆ ವ್ಯವಹರಿಸುವಾಗ ಆಡಿದ ಮಾತುಗಳನ್ನು ನಂತರ ಬರೆದಿಟ್ಟಿರಬಹುದು. ಆದರೆ, "ಚರ್ಚಾಗೋಷ್ಠಿ, ವಾದ-ವಿವಾದ ನಡೆಯುವಾಗ ಕೆಲವು ಓಲೆಯಕಾರರು ಬರೆದಿಟ್ಟುಕೊಳ್ಳುತ್ತಿದ್ದರು. ವಚನ ಬಾಂಢಾರಿ ಶಾಂತರಸರ ನೇತೃತ್ವದಲ್ಲಿ ಅವು ಗ್ರಂಥ ಭಂಡಾರವನ್ನು ಸೇರುತ್ತಿದ್ದವು ಎಂಬುದು ಊಹೆ." ಎಂಬ ನಾರಾಯಣರ ಮಾತು ಸಮರ್ಥನೀಯವಲ್ಲ.

ಏಕೆಂದರೆ ಅಕ್ಕ ಮಹಾದೇವಿ–ಪ್ರಭುದೇವರ ಸಂವಾದ, ನುಲಿಯ ಚಂದಯ್ಯನು ಅನುಭವ ಮಂಟಪದಲ್ಲಿ ಮಾಡಿದ ಚರ್ಚೆ, ಆಯ್ದಕ್ಕಿ ಮಾರಯ್ಯನ– ಲಕ್ಕಮ್ಮರ ಸಂವಾದ, ಇವು ಚರ್ಚೆಯ ಪ್ರತಿಫಲ ಎಂಬುದರಲ್ಲಿ ಸಂದೇಹವೇ ಬರದು. ಏಕೆಂದರೆ ಪ್ರಭು ಕೇಳುವ ಪ್ರಶ್ನೆಗೆ ಸುಸಂಬದ್ಧ ಉತ್ತರ ಅಕ್ಕ ಕೊಡುವಳು.

ಪ್ರ– ಇಲ್ಲಿಗೇಕೆ ಬಂದೆ- ಈ ಯೌವನದಲ್ಲಿ ?

ಉ– ಶರಣರ ಸಂಗದಲ್ಲಿ ದಿನಂಗಳ ಕಳೆಯಲು.

ಪ್ರ– ಗಂಡ ಯಾರು ?

ಉ– ಚನ್ನಮಲ್ಲಿಕಾರ್ಜುನ.

ಪ್ರ– ನಿಜ ವೈರಾಗ್ಯವಿದ್ದರೆ ಬಟ್ಟೆಯನ್ನು ಕಳಿಚಿವವಳು ಕೂದಲನ್ನು ಮುಚ್ಚಿಕೊಂಡಿದ್ದೇಕೆ ?

ಉ– ನನಗೋಸ್ಕರ ಅಲ್ಲ : ಕಾಮನ ಮುದ್ರೆಯ ಕಂಡು ನಿಮಗೆ ನೋವಾಗಬಾರದೆಂದು !

ಈ ದಾಟಿ ಇಬ್ಬರು ಮಾತನಾಡಿದಂತೆ ಇದೆ. ಅಂದಾಗ ಇಂತಹ ಚರ್ಚಾಗೋಷ್ಠಿ ನಡೆದಿಲ್ಲ ಎಂದು ಊಹಿಸುವುದರ, ಸ್ಥಿರೀಕರಿಸುವುದರ ಉದ್ದೇಶವೇನು? ಅನುಭಾವಿಗಳಾದ ಶರಣರು ಗವಿಯಲ್ಲಿ ಕುಳಿತು ಶಿವಯೋಗಸಾಧನೆ ಮಾಡಿ, ಸೂಕ್ಷ್ಮಾತಿ ಸೂಕ್ಷ್ಮ ಅನುಭವಗಳನ್ನು ಬರೆದಿಟ್ಟುದನ್ನು, ಬೇರೆಬೇರೆ ಸನ್ನಿವೇಶಗಳಲ್ಲಿ ಬಂದ ಭಾವನೆಗಳನ್ನು ವಚನರೂಪದಲ್ಲಿ ಬರೆದುದನ್ನು ಅನುಭವ ಮಂಟಪದ ಸಾಹಿತ್ಯ ಭಂಡಾರಕ್ಕೆ ಒಪ್ಪಿಸಿದರೆಂದೇ ವಚನ ಸಾಹಿತ್ಯ ಒಂದೆಡೆ ಕ್ರೋಢಿಕರಣಗೊಂಡಿತು. ಜೊತೆಗೆ ಸಹಜವಾಗಿ ನಡೆಯುತ್ತಿದ್ದ ಚರ್ಚೆಗಳೂ ಮಂಟಪದಲ್ಲಿ ದಾಖಲಾಗಿವೆ. ಇಲ್ಲದಿದ್ದರೆ ಸುಸಂಬದ್ಧ ಪ್ರಶ್ನೋತ್ತರ ರೂಪದ ಸಂವಾದ ಲಭ್ಯವಿರುತ್ತಿರಲಿಲ್ಲ.

ಯಾರಾದರೂ ನಂತರದಲ್ಲಿ ಇಂಥ ಚರ್ಚೆ, ಸಂವಾದ ಕಲ್ಪಿಸಿಕೊಂಡು ಪ್ರಸಂಗಗಳನ್ನು ಹೆಣೆದಿರಬಹುದೆ ? ಖಂಡಿತಾ ಸಾಧ್ಯವಿಲ್ಲ. ಇಂತಹ ಅಮೋಘ, ಅತ್ಯುನ್ನತ ವಿಚಾರಗಳು ಚಿಂತಕರು, ಅನುಭಾವಿಗಳು ಅಲ್ಲದವರಿಗೆ ಬರಲು ಸಾಧ್ಯವೆ ? ಅಂತಹ ಸಾಮರ್ಥ್ಯ, ಸ್ವಂತಿಕೆ ಇದ್ದವನು ಬೇರೆಯವರ ಹೆಸರಲ್ಲಿ ಯಾಕೆ ಹೆಣೆಯ ಹೋಗುವನು? ಶೂನ್ಯ ಸಂಪಾದನೆಯ ಕರ್ತೃಗಳು ಕೇವಲ ತಮ್ಮವಾಗಿ ಕೆಲವು ಸಂಪರ್ಕ ವಾಕ್ಯಗಳನ್ನು ಹಾಕಿರಬಹುದೇ ವಿನಾ ವಚನಗಳನ್ನೇ ರಚಿಸುವ ಮಟ್ಟಕ್ಕೆ ಹೋಗರು. ಶ್ರೀ ಚಂದ್ರಶೇಖರ ಶಾಸ್ತ್ರಿಗಳು ಆಧುನಿಕ ಪಾರ್ಲಿಮೆಂಟಿನ ರೀತಿಯಲ್ಲಿ ಚರ್ಚೆ ನಡೆಯುತ್ತಿತ್ತು. ಎಂದು ಹೇಳಿರುವುದನ್ನು ನಾರಾಯಣರು ಕಟ್ಟುಕತೆ ಎಂದಿದ್ದಾರೆ. ಸಾಮಾನ್ಯವಾಗಿ ಇಂಥ ಒಂದು ಸಂಸ್ಥೆಯನ್ನು ಬೇರೆ ಬೇರೆ ಅಂತಹ ಸಂಸ್ಥೆಗಳೊಡನೆ ಹೋಲಿಸುವುದುಂಟು. "ಈ ಮಹಿಳೆ ಆತನ ಹೆಂಡತಿಯನ್ನೇ ಹೋಲುತ್ತಾಳೆ." ಎಂದು ಹೇಳಿದರೆ ಆತನ ಹೆಂಡತಿಯೇ ಅಂದಂತೇನೂ ಅಲ್ಲ ತಾನೆ? ಹಾಗೇ ಅನುಭವ ಮಂಟಪ ಪಾರ್ಲಿಮೆಂಟನ್ನು ಹೋಲುತ್ತದೆ, ಅಂದ ಮಾತ್ರಕ್ಕೆ ಪಾರ್ಲಿಮೆಂಟಿನಲ್ಲಿ ಕೆಲವೊಮ್ಮೆ ಸದಸ್ಯರು ಕೂಗಾಡುವಂತೆ ಶರಣರೂ ಕೂಗಾಡುತ್ತಿದ್ದರು ಎಂದು ಹೋಲಿಕೆಯನ್ನು ವಿಸ್ತರಿಸಬಾರದು ಎಷ್ಟಕ್ಕೆ ಬೇಕೋ ಅಷ್ಟಕ್ಕೆ ಸೀಮಿತಗೊಳಿಸಬೇಕು.

ಪ್ಲೇಟೋನ ಅಕಾಡಮಿ, ಅಕ್ಬರನ ದಿನ್–ಇಲಾಹಿ, ಜನಕ ಮಹಾರಾಜನ ಒಡ್ಡೋಲಗ, ಪಾರ್ಲಿಮೆಂಟ್ ಇವುಗಳೊಡನೆ ಸಾಮಾನ್ಯವಾಗಿ ಅನುಭವ ಮಂಟಪವನ್ನು ಹೋಲಿಸಬಹುದು. ಪ್ಲೇಟೋನ ಅಕ್ಯಾಡಮಿ ಒಂದು ರೀತಿಯಲ್ಲಿ ಚಿಂತಕರ ಚಾವಡಿ, ಆದರ್ಶ ರಾಜ್ಯದ ಬಗ್ಗೆ ಚರ್ಚಿಸಿದ ಕೂಟ. ದಿನ್-ಇಲಾಹಿ ಎಲ್ಲ ಧರ್ಮದ ಪಂಡಿತರ ಒಂದು ಒಕ್ಕೂಟ, ಜನಕ ಮಹಾರಾಜನ ಆಸ್ಥಾನ ತತ್ತ್ವಜ್ಞಾನಿಗಳ ಬೀಡು. ಅನುಭವ ಮಂಟಪ ಕೇವಲ ಚಿಂತಕರ ಚಾವಡಿ, ಪಂಡಿತರ ಸಭೆ, ತತ್ತ್ವಜ್ಞಾನಿಗಳ

ಬೀಡಾಗದೆ ಅನುಭಾವಿಗಳ ಸುಂದರ ಸರೋವರವಾಯಿತು. ಒಂದು ಜೀವಂತಿಕೆಯ ಕೇಂದ್ರವಾಯಿತು. ಹೀಗಾಗಿ ಹೂವಿನ ವನವನ್ನು ಹುಡುಕಿಕೊಂಡು ಹಾರಿಬರುವ ಜೇನ್ನೊಣಗಳಂತೆ ಮುಮುಕ್ಷುಗಳು, ಸಾಧಕರು, ಸಿದ್ಧಪುರುಷರು ಆಕರ್ಷಿತರಾಗಿ, ಧಾವಿಸಿಬಂದರು,

ಪಾರ್ಲಿಮೆಂಟಿನಲ್ಲಿ ಒಬ್ಬ ಅಧ್ಯಕ್ಷರಿರುವರು, ಅದೇ ರೀತಿ ಇಲ್ಲಿ ಅಲ್ಲಮ ಪ್ರಭು. ಮನಸ್ಸಿಗೆ ಬಂದಂತೆ ಮಾತಾಡುವ ಹರಟೆಯಾಗದೆ ಶಿವಾನುಭವ ಗೋಷ್ಠಿಯು ಬೇರೆ ಬೇರೆ ಸಂಗತಿಗಳನ್ನು, ಸಮಸ್ಯೆಗಳನ್ನು ಚರ್ಚಿಸುತ್ತಿತ್ತು. ಆಧುನಿಕ ಲೋಕಸಭೆಯಲ್ಲಿ ಹೇಗೆ ಪ್ರಶ್ನೆ ಕೇಳುವ ಹಕ್ಕು ಎಲ್ಲರಿಗಿದೆಯೋ ಹಾಗೆ ಅನುಭವ ಮಂಟಪದಲ್ಲಿ ಯಾರು ಬೇಕಾದರೂ ಪ್ರಶ್ನೆ ಕೇಳಬಹುದಿತ್ತು. ತಮ್ಮ ಅಭಿಪ್ರಾಯವನ್ನು ಮಂಡಿಸುವ ವಾಕ್ ಸ್ವಾತಂತ್ರ್ಯವು ಈಗಿನ ಲೋಕಸಭೆಯಲ್ಲಿದ್ದಂತೆ, ಆಗಲೂ ಶರಣರು ತಮ್ಮ ಅಭಿಪ್ರಾಯ ಮಂಡಿಸಬಹುದಿತ್ತು. ಎಲ್ಲರ ಅಭಿಪ್ರಾಯಕ್ಕೂ ಮಾನ್ಯತೆ ಇತ್ತು. ಈಗ ಚುನಾವಣೆ ಮೂಲಕ ವ್ಯಕ್ತಿ ಗೆದ್ದು ಬಂದರೆ, ಆಗ ಪಾರಮಾರ್ಥಿಕ ನಿಲುವನ್ನು ಸ್ವಯಂ ಪ್ರಯತ್ನದಿಂದ ಗಳಿಸಿಕೊಂಡು ಅನುಭವ ಮಂಟಪದ ಸದಸ್ಯನಾಗಬಹುದಿತ್ತು. ಲೋಕಸಭೆಯಂತೆಯೇ ಕಾರ್ಯಕಲಾಪ ಮಾಡುತ್ತ, ಜನಜೀವನದ ಚಿಂತನೆಯನ್ನು, ಲೌಕಿಕ–ಪಾರಮಾರ್ಥಿಕ ಎರಡೂ ದೃಷ್ಟಿಯಿಂದ ಮಾಡುತ್ತ ಪಾರ್ಲಿಮೆಂಟಿಗೂ ಮೀರಿದ ಸಂಸ್ಥೆಯೊಂದರ ಘನತೆ– ಐತಿಹಾಸಿಕತೆ ಒಪ್ಪಿಕೊಳ್ಳಲು ಮಾತ್ಸರ್ಯ ಏಕೆ ಅಡ್ಡಿ ಬರಬೇಕು. ಇದು ಕನ್ನಡಿಗರಿಗೇ ಹೆಮ್ಮೆಯ ಸಂಗತಿಯಲ್ಲವೆ ?

ಪ್ರಭುದೇವ ಹಾಗು ಸಾಮಾಜಿಕ ಹೊಣೆಗಾರಿಕೆ

ಪ್ರಸ್ತುತ ಕೃತಿಯ 8ನೆಯ ಲೇಖನ ಪ್ರಭುದೇವರನ್ನು ಕುರಿತಾದುದು.

ಆಕ್ಷೇಪಗಳು

1. ಕಾಮಲತೆಯ ದುರ್ಮರಣ ಅವನನ್ನು (ಪ್ರಭುದೇವರನ್ನು) ಮತ್ತಷ್ಟು ಖಿನ್ನನನ್ನಾಗಿ ಮಾಡಿತು. ಈ ವೈಯಕ್ತಿಕ ನಿರಾಶೆಯನ್ನು ಗೆಲ್ಲಲು ಅವನ ಮನಸ್ಸು ಕಠಿಣವಾಗಬೇಕಾಯಿತು, ತೀವ್ರವಾಗಿ ವೈರಾಗ್ಯ ಪರವಾಯಿತು...... ಅತೀವ ಖಿನ್ನತೆ ಅವನನ್ನು ಆವರಿಸಿರುವಾಗ **ಬದುಕಲು ಬೇಕಾದದ್ದು** ಕಾಠಿಣ್ಯ, ನೈಷ್ಠುರ್ಯ. ಆದ್ದರಿಂದ ಅವನ ಮಾತು ಕಡ್ಡಿಯನ್ನು ಎರಡು ತುಂಡು ಮಾಡಿದಂತೆ. [ಪುಟ 148]
2. ಅಲ್ಲಮಪ್ರಭುವು ಸಾಮಾನ್ಯ ಜನರ ಬಗ್ಗೆ ಹೊಂದಿದ ಭಾವನೆಯೆಂತಹುದು ಎಂಬುದನ್ನು ಡಾ॥ ಪಿ. ವಿ. ನಾರಾಯಣರು ಹೀಗೆ ಬರೆಯುತ್ತಾರೆ. "ಸಾಗರದೊಳಗಿಪ್ಪ ಪ್ರಾಣಿಗಳು ಮತ್ತೊಂಡೆಡೆಯಲ್ಲಿ ಇರಬಲ್ಲವೆ? ಭವಸಾಗರದೊಳಗಿಪ್ಪ

ಜೀವಿಗಳಿಗೆ ಅದೇ ಗತಿಯಲ್ಲದೆ ಬೇರೆ ಮತ್ತೊಂದೆಡೆಯುಂಟೇ ? ಗುಹೇಶ್ವರನ ಲೀಲೆ ಜಗನ್ಮಯವಾದಡೆ ನಾನು ಬೆರಗಾದೆನು." ಭವ ಸಾಗರದಲ್ಲಿರುವ ಜನರ ಬಗ್ಗೆ ಕಿಂಚಿತ್ ಅನುಕಂಪವನ್ನು ತೋರಿ, ಅವರ ಕಣ್ಣೀರು ಕಂಡು ಕರಗುವ ಸ್ವಭಾವವನ್ನೇ ಹೊಂದದ ಅಲ್ಲಮನು ಅದನ್ನು ತೊಡೆಯಲು ಪ್ರಯತ್ನ ಮಾಡುತ್ತಾನೆಯೇ? [ಪುಟ 149]
3. ಸಮಾಜದಿಂದ ಬಹಿಷ್ಕೃತನಾಗಿದ್ದಿರಬಹುದಾದ ; ಕಾಮಲತೆಯ ಸಾವಿನ ನಂತರ ತೀರ ಒಂಟಿಯಾದ ಅಲ್ಲಮ ಒಂದು ರೀತಿಯಲ್ಲಿ ಸಮಾಜದ ಬಗ್ಗೆ **ಕಠಿಣವಾಗಿ ಪ್ರತೀಕಾರ** ತೋರಿಸುತ್ತಾನೇನೋ ಎನ್ನಿಸುತ್ತದೆ. [ಪುಟ 150]
4. ಅಲ್ಲಮನದು ಜ್ಞಾನ ಮಾರ್ಗ, ಕರ್ಮಮಾರ್ಗವಲ್ಲ. ಕರ್ಮದಿಂದ ವ್ಯಕ್ತಿಯೊಬ್ಬನು ಸಾಧನೆಯ ಮಾರ್ಗದಲ್ಲಿ ತಲುಪಬಹುದಾದದ್ದು ಕೇವಲ ಸೀಮಿತ ಎಂದೇ ಅವನ ನಂಬಿಕೆ. ಸಮಾಜೋಪಕಾರಿಯಾದ ಕೆಲಸಗಳು ವ್ಯಕ್ತಿಯ ಆತ್ಯಂತಿಕ ಬಿಡುಗಡೆಗೆ ಸಹಾಯಕವಾಗುವುದಿಲ್ಲ. ಎಂಬುದನ್ನು ಅಲ್ಲಮ ತನ್ನ ವಚನಗಳಲ್ಲಿ ಸಾರುತ್ತಾನೆ. ನಿದರ್ಶನ ನೋಡಿ ;

   ಅನ್ನವನಿಕ್ಕಿ ನನ್ನಿಯ ನುಡಿದು,
   ಅರವಟ್ಟಿಗೆಯನಿಕ್ಕಿ ಕೆರೆಯ ಕಟ್ಟಿಸಿದರೆ
   ಮರಣದಿಂದ ಮೇಲೆ ಸ್ವರ್ಗ ಉಂಟಲ್ಲದೆ
   ಶಿವನ ನಿಜವು ಸಾಧ್ಯವಾಗದು.
   ಗುಹೇಶ್ವರನನರಿದ ಶರಣಂಗೆ ಆವ ಫಲವು ಇಲ್ಲ. [ಪುಟ 150]
5. ಸಿದ್ಧರಾಮನ ತಾವಿಗೆ ಬಂದ ಅಲ್ಲಮ ಅವನ ಬಗ್ಗೆ ಒಂದಿಷ್ಟು ತಿರಸ್ಕಾರ ಭಾವನೆಯನ್ನೇ ತಾಳಿದ್ದಾನೆ— "ಕರೆಯೋ ಒಡ್ಡರೆರೆಯನಂ" ಎಂದೇ ಹೇಳಿಕಳಿಸುತ್ತಾನೆ. [ಪುಟ 151]
   "ಜಡರ ನಡುವಿರಲವರ ಸಂಗದಿಂ ಕಾಯಗುಣವಿಡಿದು ಬಳಲುವರು" ಎಂದೇ ಪ್ರತಿಪಾದಿಸುತ್ತಾನೆ. ಕೊನೆಗೆ ಮಾನವರ ನಡುವಿರಲು ಬೇಡ ಸಿದ್ಧೇಂದ್ರ" ಎಂದು ಸಿದ್ಧರಾಮನಿಗೆ ಬುದ್ಧಿ ಹೇಳುತ್ತಾನೆ. ಶೂನ್ಯ ಸಂಪಾದನೆಯಲ್ಲಿ ಈ ಪ್ರಸಂಗ ಅಲ್ಲಮ--ಸಿದ್ಧರಾಮರ ಕಲಹಕ್ಕೆ ಕಾರಣವಾಗುತ್ತದೆ. ಅವರಿಬ್ಬರೂ ಪರಸ್ಪರ ಶಕ್ತಿ ಪ್ರದರ್ಶನದಲ್ಲಿ ತೊಡುಗುವಂತಾಗುತ್ತದೆ. [ಪುಟ 151]
6. ವಚನ ಚಳುವಳಿಯ ಹೆಗ್ಗಳಿಕೆಯ ಅಂಶ, ಕಾಯಕದ ಪರಿಕಲ್ಪನೆ .... ಕಾಯಕಕ್ಕಿಂತ ಜಂಗಮದಾಸೋಹವೇ ಮುಖ್ಯವೆಂಬಂತೆ ಅಲ್ಲಮನು ವಾದ ಮಾಡುವ ಸನ್ನಿವೇಶವನ್ನು ಶೂನ್ಯ ಸಂಪಾದನೆ ಚಿತ್ರಿಸುತ್ತದೆ. ಭೌತಿಕ ಸಂಪತ್ತಿನ ಸೃಷ್ಟಿಗೆ ಕಾರಣವಾಗುತ್ತದೆನ್ನುವದಕ್ಕೊ ಏನೋ ಕಾಯಕವು ಇತರರಿಗೆ ಕಂಡಷ್ಟು ಮಹತ್ತ್ವದ್ದಾಗಿ ಅಲ್ಲಮನಿಗೆ ಕಾಣಿಸುವುದಿಲ್ಲ.

ಈ ಬರಹ ಉಳಿದೆಲ್ಲ ಲೇಖನಗಳಿಗಿಂತ ಬಹಳ ದುರ್ಬಲವಾಗಿ ಜಾಳುಜಾಳಾಗಿ ಇದೆ. ಕ್ರಮಸಂಖ್ಯೆಯ ಪ್ರಕಾರ ವಿಮರ್ಶಿಸೋಣ.

1. ಕಾಮಲತೆಯ ಪ್ರಸಂಗವು ಸಹ ಇನ್ನೂ ವಿವಾದಾಸ್ಪದವಾದುದಾಗಿದೆ. ರಗಳೆಯ ಕವಿ ಹರಿಹರನು ಕಾಮಲತೆಯ ಪ್ರಸಂಗವನ್ನು ಪ್ರಸ್ತಾಪಿಸಿದ್ದರೆ, ಪ್ರಭುಲಿಂಗಲೀಲೆಯ ಚಾಮರಸ ಇದನ್ನು ಪ್ರಸ್ತಾಪಿಸಿಲ್ಲ. ಮಹಾತ್ಮರ ಜೀವನದಲ್ಲಿ ಪರಿವರ್ತನಾಪೂರ್ವದ ಬದುಕಿನಲ್ಲಿ ವಿಲಕ್ಷಣವಾದ ಪ್ರಸಂಗಗಳು ಜರುಗಿರುತ್ತವೆ. ಅವು ಆ ವ್ಯಕ್ತಿಯ ಸಮಗ್ರ ಜೀವನದ ಸಾಧನೆಯ ದೃಷ್ಟಿಯಿಂದ ಅಪ್ರಸ್ತುತ ಎಂದು ಕೆಲವು ಕವಿಗಳು ಅಂಥವನ್ನು ಕೈಬಿಟ್ಟು, ಪರಿವರ್ತನಾನಂತರದ (Post-Conversion)ಘಟನೆಗಳಿಗೆ ಒತ್ತುಕೊಡುವರು.

ವಾದಕ್ಕಾಗಿ ಕಾಮಲತೆಯ ಪ್ರಸಂಗ ನಡೆದಿರಬಹುದೆಂದೇ ಭಾವಿಸಿಕೊಳ್ಳೋಣ. ಉತ್ಕಟವಾಗಿ ಪ್ರೀತಿಸುತ್ತಿದ್ದ ಒಬ್ಬ ವ್ಯಕ್ತಿಯ ದುರ್ಮರಣ ಅಲ್ಲಮನನ್ನು ಖಿನ್ನನನ್ನಾಗಿ ಮಾಡಿರಬಹುದು ಮತ್ತು ಈ ವೈಯಕ್ತಿಕ ನಿರಾಶೆಯನ್ನು ಗೆಲ್ಲಲು ಅವನ ಮನಸ್ಸು ಅತ್ಯಂತ ಕಠಿಣವಾಗಬೇಕಾಯಿತು ಎಂಬ ಉಲ್ಲೇಖ ಅರ್ಧಸತ್ಯ. ಖಿನ್ನತೆ (depression) ಮಹಾತ್ಮರ ಜೀವನದಲ್ಲಿ ಬಹುದೊಡ್ಡ ಪಲ್ಲಟ ತರುತ್ತದೆ. ಅಶೋಕನ ಖಿನ್ನತೆ, ಕಳಿಂಗಯುದ್ಧಾನಂತರ ಆತನನ್ನು ಅಹಿಂಸಾವಾದಿಯನ್ನಾಗಿ ಮಾಡಿತು. ಕ್ರೌಂಚ ಪಕ್ಷಿಯ ರೋದನ ವಾಲ್ಮೀಕಿಯನ್ನು ಖಿನ್ನಗೊಳಿಸಿತು, ಅಂತರ್ಮುಖಿಯನ್ನಾಗಿ ಮಾಡಿತು. ಅದೇ ರೀತಿ ಕಾಮಲತೆಯ ದುರ್ಮರಣ ಅಲ್ಲಮನನ್ನು ಖಿನ್ನಗೊಳಿಸಿರಬಹುದು. ಇದರ ಪರಿಣಾಮ ಪಿ. ವಿ. ನಾರಾಯಣರು ತಿಳಿದಂತೆ, ಕಾಠಿಣ್ಯವಲ್ಲ, ನಿಷ್ಠುರತೆಯಲ್ಲ, ಅದನ್ನು ಆಧ್ಯಾತ್ಮಿಕ ಭಾಷೆಯಲ್ಲಿ **ನಿರ್ಲಿಪ್ತತೆ** ಎನ್ನುತ್ತೇವೆ.

ನಾರಾಯಣರು ಪುಟ 150 ರಲ್ಲಿ ಆಡಿರುವ ಮಾತಂತೂ ತೀರಾ ಅಪ್ರಬುದ್ಧವಾದುದು. ನಮ್ಮ ಉಲ್ಲೇಖ 3 ನೋಡಿರಿ. ಕಾಮಲತೆಯ ಪ್ರಸಂಗದಿಂದ ಅಲ್ಲಮ ಸಮಾಜದಿಂದ ಬಹಿಷ್ಕೃತನಾಗಿದ್ದಿರಬಹುದು. ಇದರಿಂದ ತೀರಾ ಒಂಟಿಯಾದ ವ್ಯಕ್ತಿಯಾದ ಅಲ್ಲಮ **ಸಮಾಜದ ಬಗ್ಗೆ ಕಠಿಣನಾಗಿ ಪ್ರತೀಕಾರ ತೋರಿಸುತ್ತಾ**ನೇನೋ ಎನ್ನಿಸುತ್ತದೆ.

ಈ ವಿವರಣೆ ನಾರಾಯಣರ ವಿಶ್ಲೇಷಣೆಯಲ್ಲಿನ ದೌರ್ಬಲ್ಯವನ್ನು ತೋರಿಸುತ್ತದೆ. ಏಕೆಂದರೆ ಸಮಾಜದ ಅವಹೇಳನಕ್ಕೆ ಗುರಿಯಾದ ವ್ಯಕ್ತಿ, ಅದರ ಮೇಲೆ ಪ್ರತಿಕಾರ ತೋರಿಸುವುದು ಯಾವಾಗ ? ಅವನು ಮತಿಹೀನನು, ಸಂಸ್ಕಾರ ರಹಿತನು ಆದಾಗ ಮಾತ್ರ. ಅಂಥ ವ್ಯಕ್ತಿಗಳು ಕ್ರೂರಿಗಳು, ಕೊಲೆಗಡುಕರು, ಹಿಂಸಾವಾದಿಗಳೂ ದಯಾಹೀನರು ಆಗುತ್ತಾರೆ. ಉದಾಹರಣೆಗೆ, ದಿ॥ ರಾಜೀವರನ್ನು ಮಾನವ

ಬಾಂಬ್ ಆಗಿ ಸಾಯಿಸಿದ ಧಾನುವಿನ ಕ್ರೂರವರ್ತನೆಗೆ ಕಾರಣವಾದುದು ಭಾರತೀಯ ಶಾಂತಿಪಾಲನಾಪಡೆ ಶ್ರೀಲಂಕಾದಲ್ಲಿ ಧಾನುವಿನ ಆತ್ಮೀಯರನ್ನು ಕೊಂದುದು. ಆದರೆ ಅಲ್ಲಮಪ್ರಭುವಿನಂತಹ ಮಹಾಪುರುಷರಲ್ಲಿ, **ಬದುಕಿನ ವೇದನೆ, ಅಗಲಿಕೆಯ ನೋವು** ಯಾರನ್ನೂ ಕುರಿತು ಪ್ರತೀಕಾರ ಮನೋಭಾವ ತಾಳದು. ಜೀವನದ ನಶ್ವರತೆ ಬಗ್ಗೆ ಮನನ ಮಾಡಿಕೊಟ್ಟು ಅವರಲ್ಲಿ **ನಿರ್ಲಿಪ್ತತೆ** ಬೆಳೆಸುತ್ತದೆ. ಸೈಕಾಲಜಿ ಆಫ್ ರಿಲಿಜನ್‌ನಲ್ಲಿ ಓದುತ್ತೇವೆ. ಹೆಣ್ಣು-ಹೊನ್ನು-ಮಣ್ಣಿನಲ್ಲಿರುವ ಉತ್ಕಟ ವ್ಯಾಮೋಹ ಪರಿವರ್ತನೆಗೊಂಡು ಅಷ್ಟೇ ಶಕ್ತಿಶಾಲಿ ವಿರಕ್ತಿಯಾಗಿ ದೇವರು-ಧರ್ಮ-ಮಾನವೀಯತೆಯ ಕಡೆಗೆ ತಿರುಗಿಬಿಡುತ್ತದೆ.

"ಎಂತಹ ನಶ್ವರವೀ ಬದುಕು. ಎಲ್ಲ ಆದರ್ಶಗಳನ್ನು ಬದಿಗೊತ್ತಿ ನಾನು ಈಕೆಯನ್ನು ಪ್ರೀತಿಸುತ್ತಿದ್ದೆ. ಈ ಜೀವನ ಅರ್ಥರಹಿತ. ಇಷ್ಟೇ ಉತ್ಕಟವಾಗಿ ದೇವರನ್ನು ನಾನು ಪ್ರೀತಿಸಿದ್ದರೆ ಅವನ ಒಲುಮೆ ಪಡೆದು ಅಮರನಾಗುತ್ತಿದ್ದೆ." ಹೀಗೆಲ್ಲ ಆಲೋಚನೆ ಮಾಡಿ ಕೆಲವರು ಉತ್ಕಟ ಸಾಧನೆಯಲ್ಲಿ ತೊಡಗುತ್ತಾರೆ. ಆಗ ಅವರು ವೈಯಕ್ತಿಕವಾಗಿ ನಿಯಮಗಳಲ್ಲಿ ಕಾಠಿಣ್ಯ, ದೌರ್ಬಲ್ಯಕ್ಕೆ ಸೋಲದಿರುವ ನೈಷ್ಠುರ್ಯ ಬೆಳೆಸಿಕೊಳ್ಳುವರೇ ವಿನಾ, ಸಮಾಜವನ್ನು ಕುರಿತಲ್ಲ. ಸಮಾಜ ಕುರಿತು ಬೆಳೆಸಿಕೊಂಡರೆ ಅಂಥವರು ಅಪರಾಧಿಗಳಾಗುವರೇ ವಿನಾ ಜ್ಞಾನಿಗಳಲ್ಲ. ಅಲ್ಲಮಪ್ರಭುವಿನ ಜೀವನದಲ್ಲಿ ಎಲ್ಲಿಯೂ ಯಾರ ಮೇಲೂ ಪ್ರತೀಕಾರ ಮಾಡಿದ ಪ್ರಸಂಗಕಾಣಬರದು. ಪ್ರತೀಕಾರ ತೋರಿಸಿದ್ದರೆ ಅದು ಆ ವ್ಯಕ್ತಿಯ ಕೆಡುಕಿಗೆ ಕಾರಣವಾಗುತ್ತದೆ. ಗುರುವಾಗಿ ಉಪದೇಶ ಮಾಡಿದ ಪ್ರಭುವು ವಿವಿಧ ರೀತಿಯಿಂದ ಜನರನ್ನು ಮೇಲೆತ್ತಿ ಉದ್ಧರಿಸಿರುವನೇ ವಿನಾ, ಪ್ರತೀಕಾರ ಮಾಡಿ ನಾಶಕ್ಕೆ ಅಥವಾ ಕೆಡುಕಿಗೆ ಕಾರಣವಾಗಿಲ್ಲ.

ಆತ್ಮ ವಿಶ್ವಾಸದ ಧಾಟಿ

ಗುರು ಬಸವಣ್ಣನವರದು ಮಾತೃವಾಣಿ, ಪ್ರಭುದೇವರದು ಪಿತೃವಾಣಿ. ಹೇಳುವ ಶೈಲಿ ಬೇರೆಬೇರೆ ಇದ್ದರೂ ಅಂತರಂಗದ ಉದ್ದೇಶವೊಂದೆ. ಇಲ್ಲಿ ವೈಯಕ್ತಿಕ ವಿಷಯ ಅಗತ್ಯವಿಲ್ಲ ; ಆದರೂ ಪ್ರಭುದೇವರ ಧಾಟಿಯನ್ನು ಅರ್ಥಮಾಡಿಕೊಳ್ಳಲು ಉದಾಹರಣೆಯಾಗಿ ಕೊಟ್ಟರೆ ಅನುಚಿತವಾಗದು. ಸಾಮಾನ್ಯವಾಗಿ ಪೂಜ್ಯ ಅಪ್ಪಾಜಿಯವರ ಮತ್ತು ನಮ್ಮ ಪ್ರವಚನಗಳನ್ನು ಗಮನಿಸಿದರೆ ಈ ವ್ಯತ್ಯಾಸ ಗುರುತಿಸಬಹುದು. ಒಳಗಿನ ಸತ್ವ, ತತ್ತ್ವ, ಉದ್ದೇಶ ಎಲ್ಲವೂ ಒಂದೇ ಇದ್ದರೂ ನನ್ನ ಶೈಲಿ ಬೇರೆ, ಅಪ್ಪಾಜಿಯವರ ಶೈಲಿ ಬೇರೆ. ಗುರೂಜಿಯವರು ಬೇಕೆಂದೇ ವಿಡಂಬಿಸಿ, ಛೇಡಿಸಿ, ಛಾಲೆಂಜ್ ಕೊಟ್ಟು ತತ್ತ್ವಗಳನ್ನು ಪ್ರತಿಪಾದಿಸುವರು. ಆಗ ಮಾತನಾಡುವುದರಲ್ಲಿ ತಾವು ಹೇಳುವ ವಿಷಯದಲ್ಲಿರುವ ಆತ್ಮವಿಶ್ವಾಸ ವ್ಯಕ್ತವಾಗುವುದೇ ವಿನಾ ಅದನ್ನು ನಾವು ಕಾಠಿಣ್ಯ, ಪ್ರತೀಕಾರ ಎನ್ನುಲಾಗುವುದಿಲ್ಲ. ಗುರು ಬಸವಣ್ಣನವರ ಹೆಂಗರು

ಳನ್ನು, ತಾಯ್ತನದ ಭಾವವನ್ನು ಪ್ರಭುವಿನಲ್ಲಿ ಕಾಣದಿದ್ದರೂ, ಪ್ರತೀಕಾರ-ದ್ವೇಷ-ಕಠೋರತೆಯನ್ನು ಆರೋಪಿಸಲು ಸಾಧ್ಯವಿಲ್ಲ. ಅಕ್ಕಮಹಾದೇವಿಯನ್ನು ಕಠಿಣತಮವಾದ ಪ್ರಶ್ನೆಗಳಿಂದ, ಅವೂ ವೈಯಕ್ತಿಕ ಮತ್ತು ತಾತ್ತ್ವಿಕ ಸ್ವರೂಪದ ಪ್ರಶ್ನೆಗಳಿಂದ, ಪರೀಕ್ಷಿಸುವಾಗ ನಮಗೆ ಬಹಳ ಕೋಪ, ಮುಜುಗರ ಉಂಟಾಗಿ ಪ್ರಭುವಿನ ಬಗ್ಗೆ ಮುನಿಸು ಮೂಡಿದರೂ, ಕಡೆಯಲ್ಲಿ ಆಟದಲ್ಲಿ ತಂದೆ ಮಕ್ಕಳಿಂದ ಸೋಲೊಪ್ಪಿಕೊಳ್ಳುವಂತೆ, ಪ್ರಭು ಸೋಲೊಪ್ಪಿಕೊಂಡು,

"ಇದು ಲೇಸಾಯಿತ್ತು, ಇದು ಲೇಸಾಯಿತ್ತು" ಎಂದು ಹೇಳಿ ಅಂತಿಮವಾಗಿ
ಅಂಗ ಅಂಗನೆಯ ರೂಪವಲ್ಲದೆ
ಮನ ವಸ್ತು ಭಾವದಲ್ಲಿ ಬೆಚ್ಚಂತಿರ್ಪುದು,
ಬಂದ ಕಥನದಲ್ಲಿ ಬಂದು ಹಿಂಗಿದೆಯಲ್ಲಾ, ಅಕ್ಕ !
ಗುಹೇಶ್ವರ ಲಿಂಗದಲ್ಲಿ ಉಭಯನಾಮವಳಿದ ಎನ್ನಕ್ಕಾ.

(ಅ. ಪ್ರ. ವ 1300)

ಎಂದಾಗ ಪ್ರಭುವಿನ ಬಗ್ಗೆ ಅನನ್ಯ ಗೌರವ ಮೂಡುತ್ತದೆ. ಅಕ್ಕಮಹಾದೇವಿಯನ್ನು ಕುರಿತು ತನ್ನಂತರಂಗದಲ್ಲಿ ಉತ್ಕಟವಾಗಿರುವ ವಾತ್ಸಲ್ಯ, ಅಭಿಮಾನಗಳನ್ನು ಹತ್ತಿಕ್ಕಿಕೊಂಡು ಎಷ್ಟೂ ತೋರಗೊಡದೆ, ನಿಷ್ಠುರತೆಯ ಸೋಗು ಹಾಕಿಕೊಂಡು, ಗಾಂಭೀರ್ಯವನ್ನು ಕಾಪಾಡಿಕೊಂಡು 'ಬಿಗಿತನ'ವನ್ನು ಪ್ರದರ್ಶಿಸುವ ಆತನ ವ್ಯಕ್ತಿತ್ವ ಬೆರಗು ಹುಟ್ಟಿಸುತ್ತದೆ.

"ಸಮಾಜದಿಂದ ಬಹಿಷ್ಕೃತನಾಗಿದ್ದರಬಹುದಾದ" ಎಂಬ ಪದವನ್ನು ಡಾ|| ಪಿ.ವಿ. ನಾರಾಯಣರು ಬಳಸಿದ್ದಾರೆ ; ಇದು ಶ್ರೀ ಡಾ|| ಚಿದಾನಂದ ಮೂರ್ತಿಯವರ ಪ್ರತಿಪಾದನೆಯ ಮೇಲೆ ಆಧರಿಸಿ ್ದಗಿದೆ. ಈ ಉಭಯ ವಿದ್ವಾಂಸರು ವಿಶ್ಲೇಷಿಸಿ ಬಳಸಿರುವ ಮಾತುಗಳನ್ನು ನೋಡಿರಿ. "ಕಾಮಲತೆಯೊಡನೆ ಆದ ಅವನ ಮದುವೆ ಅವನನ್ನು ಸಮಾಜದಿಂದ ದೂರಮಾಡಿತು. ತನ್ನ ವ್ಯಕ್ತಿತ್ವದ ಚಿಪ್ಪಿನಲ್ಲೇ ಮುದುಡಿಕೊಳ್ಳುವಂತೆ ಮಾಡಿತು. ಪ್ರಾಯಶಃ ಅಂತರ್ಜಾತೀಯ ವಿವಾಹವಾಗಿದ್ದರಿಂದ ಸಾಮಾಜಿಕ ಕ್ರೋಧಕ್ಕೂ ಪಕ್ಕಾಗಿರಬಹುದಾದ ಅಲ್ಲಮ ಸಮಾಜದ ಬಗ್ಗೆ ಒಂದು ಬಗೆಯಲ್ಲಿ ಕಹಿತನವನ್ನು ಬೆಳೆಸಿಕೊಂಡ," ಪುಟ 148

ಇವು ಬಹಳ ಅಸಂಬದ್ಧ ಮಾತುಗಳು ಮಾತ್ರವಲ್ಲ ಅಲ್ಲಮಪ್ರಭುವಿನ ವ್ಯಕ್ತಿತ್ವವು ಇರುವುದಕ್ಕೆ ವಿರುದ್ಧವಾದ ಚಿತ್ರಣ ನೀಡುತ್ತವೆ. ಏಕೆಂದರೆ ಪ್ರಭುವು ತನ್ನ ವ್ಯಕ್ತಿತ್ವದ ಚಿಪ್ಪಿನಲ್ಲೇ ಮುದುಡಿಕೂರುವ ವ್ಯಕ್ತಿಯಲ್ಲ. ಆತ ಮೊಟ್ಟಮೊದಲು ಭೇಟಿಯಾಗುವ ಗೊಗ್ಗಯ್ಯನ ಪ್ರಸಂಗದಿಂದ ಹಿಡಿದು ಗೋರಕ್ಷನವರೆಗೆ ನೋಡುತ್ತೇವೆ. ಹೋದಲ್ಲೆಲ್ಲ ಮಿಂಚುವ, ತನ್ನತನವನ್ನು ಪ್ರದರ್ಶಿಸುವ ವ್ಯಕ್ತಿ.. ಎದುರಾದವರನ್ನು ಕೆದರಿ, ಕೆರಳಿಸಿ

ಮಾತಿಗೆಳೆದು, ತನ್ನ ಆಲೋಚನಾ ಸರಣಿಯನ್ನು ಅವರಲ್ಲಿ ಬಿಂಬಿಸುವ ಸಮರ್ಥವಾಗ್ಮಿ, ಜ್ಞಾನಿ ಅಂದಾಗ ಇಂಥವರನ್ನು 'ಚಿಪ್ಪಿನಲ್ಲಿ ಮುದುಡಿಕೂರುವ' ಕೀಳರಿಮೆಯ, ಕ್ಲೈಬ್ಯದ ವ್ಯಕ್ತಿಯನ್ನಾಗಿ ಚಿತ್ರಿಸಲು ಬರದು.

ಸಾಮಾಜಿಕ ಕ್ರೋಧ-ಬಹಿಷ್ಕಾರದ ಕಲ್ಪನೆಯೂ ಅಸಂಬದ್ಧ ವಾದಕ್ಕಾಗಿ (ನಾವು ನಂಬದಿದ್ದರೂ) ಕಾಮಲತೆ-ಅಲ್ಲಮರ ದಾಂಪತ್ಯ ಪ್ರಸಂಗವನ್ನು ತೆಗೆದುಕೊಂಡರೂ, ಅಲ್ಲಿ ಬಹಿಷ್ಕಾರದ ಪ್ರಶ್ನೆ ಬರದು. ಬಹಿಷ್ಕಾರದಂತಹ ಮಡಿವಂತ ಆಚರಣೆಗಳು ಯಾವಾಗಲೂ ಮೇಲ್ವರ್ಣೀಯ ಮಡಿವಂತ ಜಾತಿಗಳಲ್ಲಿ ಆಚರಣೆಯಲ್ಲಿ ರುವವೇ ವಿನಾ ನಟ್ಟುವರು (ಮದ್ದಳೆ ಬಾರಿಸುವ) ಮುಂತಾದ ಜಾತಿಗಳಲ್ಲಲ್ಲ ಮತ್ತು ಪ್ರಭು ಸಮಾಜ ಕುರಿತು ಎಲ್ಲಿಯೂ ಕಹಿತನದ ಮಾತಾಡಿಲ್ಲ. ಇನ್ನು ಸಮಾಜ ಸುಧಾರಕರಾಗಿ ಬಸವಣ್ಣನವರು ಮಡಿವಂತಿಕೆ, ಜಾತೀಯತೆ, ಮೂಢನಂಬಿಕೆ ಕುರಿತು ಕಹಿತನದ ಮಾತಾಡುವರೇ ವಿನಾ, ಪ್ರಭುವಲ್ಲ.

ಗೊಗ್ಗಯ್ಯ, ಮುಕ್ತಾಯಕ್ಕ, ಸಿದ್ಧರಾಮ ಮುಂತಾದ ಪ್ರಸಂಗಗಳಲ್ಲಿ ಸಹ ಯಾವುದೇ ಕಹಿತನವಿರದೆ, ಗುರುವಾಗಿ ಪ್ರಭುದೇವರು ಎಚ್ಚರಿಸುವ ಧ್ವನಿ ಇದೆ. ಇನ್ನು ಲೌಕಿಕರನ್ನು ಕುರಿತು ಬರುವ ವ್ಯಂಗ್ಯೋಕ್ತಿಗಳಲ್ಲಿ ಸಹ, ಕಹಿತನ ಕಾಣದೆ ಅವರ ಇರುವಿಕೆಯ ಬಗ್ಗೆ ಅನುಕಂಪ ಅಭಿವ್ಯಕ್ತವಾಗಿದೆ. ಈ ಲೇಖನದಲ್ಲಿ ಕಹಿತನ, ಪ್ರತೀಕಾರ, ನೈಷ್ಠುರ್ಯ, ತಿರಸ್ಕಾರ ಎಂಬ ಪದಗಳು ಹಿಡಿತವಿಲ್ಲದೆ ಬಳಕೆಯಾಗಿವೆ.

ಅಲ್ಲಮ-ಸಿದ್ಧರಾಮರ ಪ್ರಸಂಗ

4. ಲಿಂಗವಂತ ಧರ್ಮದಲ್ಲಿ ಜ್ಞಾನಮಾರ್ಗ, ಕರ್ಮಮಾರ್ಗ, ಭಕ್ತಿಮಾರ್ಗ ಎಂಬ ವರ್ಗೀಕರಣ, ಅದರಂತೆ ಆಚರಣೆ ಇಲ್ಲ. ಇಲ್ಲಿರುವುದು ಶಿವಯೋಗ ಮಾರ್ಗ. ಶಿವಯೋಗಿ ಜ್ಞಾನ-ಭಕ್ತಿ-ಕರ್ಮ ಯೋಗ ಈ ಎಲ್ಲವನ್ನು ಅಳವಡಿಸಿಕೊಳ್ಳಲೇ ಬೇಕು. ಆದರೆ ಪ್ರವೃತ್ತಿ-ಅಭಿರುಚಿಗೆ ಅನುಗುಣವಾಗಿ ವ್ಯಕ್ತಿಯನ್ನು ಗುರುತಿಸಬಹುದು.

ಮಾಟ ಕೂಟ ಬಸವಣ್ಣಂಗಾಯಿತ್ತು.
ನೋಟ ಕೂಟ ಪ್ರಭುದೇವರಿಗಾಯಿತ್ತು
ಭಾವ ಕೂಟ ಅಜಗಣ್ಣಂಗಾಯಿತ್ತು
ಸ್ನೇಹ ಕೂಟ ಬಾಚಿರಾಜಂಗಾಯಿತ್ತು
ಇವೆಲ್ಲ ಕೂಡ ಚನ್ನಬಸವಣ್ಣಂಗಾಯಿತ್ತು
ಎನಗೆ ನಿಮ್ಮಲ್ಲಿ ಅವಿರಳದ ಕೂಟ ಚನ್ನಮಲ್ಲಿಕಾರ್ಜುನ.

ಗುರು ಬಸವಣ್ಣನವರು, ಕಾಯಕ-ದಾಸೋಹ-ಶರಣಸಂಗ-ಸಮಾಜ ಸೇವೆ ಮುಂತಾದ ಮಾಟದಲ್ಲೇ ಅಪೂರ್ವ ದಿವ್ಯ ತೃಪ್ತಿ ಹೊಂದಿದರೆ, ಪ್ರಭುದೇವರು ಇಷ್ಟಲಿಂಗ ತ್ರಾಟಕ -ಅಂದರೆ ಲಿಂಗನೋಟವೇ ಮುಖ್ಯವಾದ ಶಿವಯೋಗ ಸಾಧನೆಯಲ್ಲಿ ಆನಂದ ಹೊಂದು

ವರು. ಹೀಗೆ ಹೇಳುವಲ್ಲಿ ಶರಣರ ಆಸಕ್ತಿ-ಅಭಿರುಚಿಯ ಜಾಡು ತಿಳಿಯುತ್ತದೆ. ಆದರೆ ಉಳಿದ ಅಂಶಗಳನ್ನು ಶರಣನು ಅಳವಡಿಸಿಕೊಳ್ಳಲೇ ಬೇಕು.

ಕರ್ಮವು ಕೇವಲ ದುಡಿತವಾಗದೆ ಯೋಗವಾಗಬೇಕಾದರೆ ಉಳಿದ ಅಂಶಗಳನ್ನು ಹೊಂದಿರಬೇಕು. ಯೋಗವು ಸಹ ಯಾಂತ್ರಿಕ ಪರಿಶ್ರಮ ಕಸರತ್ತು ಆಗದೆ ಇರಬೇಕಾದರೆ ಭಕ್ತಿ-ಜ್ಞಾನ ಇತ್ಯಾದಿಗಳನ್ನು ಅಳವಡಿಸಿಕೊಳ್ಳಬೇಕು. ಹೀಗಿರುವಾಗ ಸಿದ್ಧರಾಮೇಶ್ವರರು ಅಪಾರ ಪ್ರತಿಭಾವಂತರಾಗಿದ್ದೂ ಕೇವಲ ಕರ್ಮನಿರತರಾಗಿದ್ದರು. ಅದಕ್ಕಾಗಿ ಆತನ ಅದ್ಭುತ ಮತ್ತು ಸುಪ್ತ ವ್ಯಕ್ತಿತ್ವವನ್ನು ಪರಿಪೂರ್ಣಗೊಳಿಸುವುದೇ ಪ್ರಭುದೇವರ ಗುರಿಯಾಗಿತ್ತು.

ಪ್ರಭುದೇವರ "ಅನ್ನವನ್ನಿಕ್ಕಿ ನನ್ನಿಯ ನುಡಿದು" ಎಂಬ ವಚನವನ್ನು ಶ್ರೀ ನಾರಾಯಣ ಉಲ್ಲೇಖಿಸಿದ್ದಾರೆ, ಆದರೆ ಅದನ್ನು ವಿಶ್ಲೇಷಿಸಿರುವುದು ಸಮರ್ಪಕವಾಗಿಲ್ಲ. ಈ ವಚನವು ಪ್ರಭುದೇವರ ಒಂದು ವೈಯಕ್ತಿಕ ಆಲೋಚನಾ ಸರಣಿಯನ್ನು ಅಭಿವ್ಯಕ್ತಗೊಳಿಸದೆ, ಒಂದು ಸಿದ್ಧಾಂತವನ್ನು ಪ್ರತಿಪಾದಿಸುತ್ತಿದೆ.

"ಪುಣ್ಯಕಾರ್ಯಗಳನ್ನು ಮಾಡುವುದರಿಂದ ಸ್ವರ್ಗವು (ಅಂದರೆ ಉತ್ತಮ ಜನ್ಮಗಳು) ಪಾಪ ಕರ್ಮಗಳನ್ನು ಮಾಡುವುದರಿಂದ ನರಕವು (ಅಂದರೆ ಕೆಟ್ಟ ಜನ್ಮಗಳು) ಬರುತ್ತಾ ಹೋಗುತ್ತವೆ. ಭವವನ್ನು ತಪ್ಪಿಸಿಕೊಳ್ಳಬೇಕಾದರೆ ಶಿವನ ಅರಿವು ಹೊಂದಬೇಕು; ಪಾಪ–ಪುಣ್ಯಗಳಿಗೆ ಅತೀತವಾಗಿ ಕಾರ್ಯ ಮಾಡಬೇಕು." ಇದೇ ಆ ಸಿದ್ಧಾಂತ. ಸಿದ್ಧರಾಮೇಶ್ವರರು ಮಾಡುತ್ತಿದ್ದುದು ಪುಣ್ಯಮಯ, ಮಾನವೀಯ ಕಾರ್ಯಗಳೇ ವಿನಾ ಪುಣ್ಯಾತೀತವಾದುದಲ್ಲ.

ಬಂಗಾರದ ಸರಪಳಿಯನ್ನು ಹತ್ತಿ ಕಟ್ಟಿಗೆ ಕಟ್ಟಲು ಬಳಸುವುದು ಜಾಣತನವೆ ? ಜ್ಞಾನಿಯೂ, ಪ್ರತಿಭಾನ್ವಿತನು, ತ್ಯಾಗಿಯೂ, ಯೋಗಿಯೂ ಆದ ಸಿದ್ಧರಾಮೇಶ್ವರರು ತನ್ನ ದೆಸೆಯಿಂದ ಆಗಬಹುದಾದ ಉತ್ತಮ ಕಾರ್ಯಬಿಟ್ಟು ಬರೀ ಇಂಥ ಕಲ್ಲುಮಣ್ಣುಗಳ ಮಧ್ಯೆ ಸಣ್ಣಾಗಬೇಕೇ ? ಅಲ್ಲಮಪ್ರಭುವಿನ ಉದ್ದೇಶ ಈ ಎಚ್ಚರಿಕೆ ಉಂಟುಮಾಡುವುದಾಗಿತ್ತು.

"ನೂಲ ಸಂಕೋಲೆಯನ್ನು ಕತ್ತರಿಸಿಕೊಂಡು, ಬಂಗಾರದ ಸರಪಳಿಯನ್ನು ಕಟ್ಟಿಕೊಂಡ ಮನುಷ್ಯನಂತೆ" ಸಿದ್ಧರಾಮೇಶ್ವರರು ತಾನು ತನ್ನದು ತನ್ನಿಂದ ತನಗೆ ಎಂಬ ಎಲ್ಲ ವ್ಯಾಮೋಹ ಕತ್ತರಿಸಿಕೊಂಡು, ಈ ಲೌಕಿಕ ಕಾರ್ಯಗಳ ಮಧ್ಯೆ ಸಿಕ್ಕುಬಿದ್ದಿದ್ದರು. ಈ ಬಂಧನದಿಂದ ಬಿಡಿಸುವ ಉದ್ದೇಶ ಪ್ರಭುದೇವರದಾಗಿತ್ತು. ಒಂದು ಜಂಜಾಟದಲ್ಲಿ ಸಿಕ್ಕುಬಿದ್ದು ತಮ್ಮ ಶಕ್ತಿಯನ್ನು ವ್ಯರ್ಥಮಾಡಿಕೊಳ್ಳುತ್ತಿದ್ದ ಜ್ಞಾನಿ ಸಿದ್ಧರಾಮೇಶ್ವರರನ್ನು ಕಂಡು ಪ್ರಭುದೇವರಿಗೆ ಅಪಾರ ಅನುಕಂಪ ಉಂಟಾಯಿತೇ ವಿನಾ ತಿರಸ್ಕಾರವಲ್ಲ.

ಸಿದ್ಧರಾಮರಂತಹ ಪರಮ ಪವಿತ್ರ ವ್ಯಕ್ತಿಯನ್ನು ಕುರಿತು ಪ್ರಭುದೇವರಂತಹ ಸಮ್ಯಕ್ ದೃಷ್ಟಿಯವರು ತಿರಸ್ಕಾರ ತಾಳುವುದುಂಟೆ ?

ಗುರುಗಳ ಸೇವೆ ಮಾಡಬೇಕು, ಅದು ಶಿಷ್ಯರ ಕರ್ತವ್ಯ ಎಂದು ನಾವು ಪೂಜೆಗೆ ಅಣಿಮಾಡಲು, ಪ್ರಸಾದ ನೀಡಲು ಅಪೇಕ್ಷೆ ಪಡುತ್ತೇವೆ. ಆಗ ಗುರುಗಳು ಅನ್ನುವರು "ಇದನ್ನು ಮಾಡಲು ಬೇರೆ ಶಿಷ್ಯರು ಇರುತ್ತಾರೆ. ನಿಮ್ಮಿಂದ ಆಗುವ ಕೆಲಸ ಇವರು ಮಾಡಲಾರರು. ಹೋಗಿ, ಏನಾದರೂ ಬರೆಯಿರಿ." ಎನ್ನುವರು. ಇದರರ್ಥ ಪೂಜೆಗೆ ಅಣಿಮಾಡುವುದು, ಪ್ರಸಾದ ಎಡೆ ಮಾಡುವುದು ತಿರಸ್ಕರಣೀಯ ಎಂದಲ್ಲ. ಹಾಗೆ ಪ್ರಭುವು ಹೇಳುವರು, "ಅಯ್ಯಾ ಸಿದ್ಧರಾಮೇಶ, ಇಂಥ ಕೆಲಸಕ್ಕೆ ನಿನ್ನ ಶಕ್ತಿಯನ್ನೇಕೆ ಹಾಳು ಮಾಡಿಕೊಳ್ಳುವೆ. ನಿನ್ನ ಸಾಮರ್ಥ್ಯಕ್ಕೆ ತಕ್ಕ ಕಾಯಕ ಮಾಡು." ಸಿದ್ಧರಾಮೇಶ್ವರರ ಪ್ರತಿಭೆ, ತ್ಯಾಗ, ಸಾಮರ್ಥ್ಯಕ್ಕೆ ಸೂಕ್ತವಾದ ಕೆಲಸ ಯಾವುದು ? ಗುರುವಿನ ಕಾಯಕ !

ತನುವೆಂಬ ಏರಿಗೆ ಮನವೆಂಬ ಕಟ್ಟೆಯ ಮಾಡಿ
ಬಲಿದು ಷಡ್ವಿಧಭಕ್ತಿಯೆಂಬ ಸೋಪಾನದಿಂದ
ಪರಮಾನಂದ ಜಲವ ತುಂಬಿ
ಕೆರೆಯ ಕಟ್ಟಬಲ್ಲವರನಾರನೂ ಕಾಣೆ !
ನಾನು ಕಟ್ಟಿದ ಕೆರೆ ಸ್ಥಿರವಾಯಿತ್ತು,
ಗುಹೇಶ್ವರಾ, ನಿಮ್ಮಾಣೆ!

ಸಿದ್ಧರಾಮೇಶ್ವರರು ಸೊನ್ನಲಾಪುರದಲ್ಲಿ ಮಣ್ಣು–ಕಲ್ಲು–ಗಾರೆಗಳ ನೆರವಿನಿಂದ ಕೆರೆಯನ್ನು ಕಟ್ಟಿಸಿದರು. ಆ ನೀರು ಕರ್ನಾಟಕದ ಇನ್ನಿತರರಿಗೆ ಉಪಯೋಗವಾಗುತ್ತಿಲ್ಲ. ಗುರುವಾಗಿ ವಚನ ವಾಙ್ಮಯದ ಕೆರೆಯನ್ನು ತಮ್ಮ ವಚನಗಳ ನೀರಿನಿಂದ ತುಂಬಿದರು. ಆ ಜ್ಞಾನಗಂಗೆ ಇಂದು ನಮಗೆಲ್ಲ ಉಪಯೋಗವಾಗುತ್ತಲಿದೆಯಷ್ಟೆ. ಅವರು ಸ್ಥಾವರ ಕೆರೆಯನ್ನಷ್ಟೆ ಕಟ್ಟಿ ಹೋಗಿದ್ದರೆ ನಾವು, ನೀವು, ಕನ್ನಡ ಸಾಹಿತ್ಯ ಅವರನ್ನು ನೆನಪಿಸಿಕೊಳ್ಳುತ್ತಿದ್ದೆವೆ. ? ಜಂಗಮ ಕೆರೆ ಕಟ್ಟಿದ್ದರಿಂದಲೇ ಅವರು ಇಂದಿಗೂ ಸ್ಮರಣೀಯರು, ಪೂಜನೀಯರು.

ನೂರಾರು ಗುಡಿಗಳನ್ನು, ಪ್ರಭುದೇವರನ್ನು ಭೇಟಿಯಾಗುವ ಪೂರ್ವದಲ್ಲಿ ಕಟ್ಟಿದರು. ಅವು ಅಲ್ಲೆ ಉಳಿದವು, ಇಂದು ಶಿಥಿಲವಾಗುತ್ತಿವೆ. ಶಿಷ್ಯಕೋಟಿ ಎಂಬ ಜಂಗಮದೇವಾಲಯ ಕಟ್ಟಿದರು. ಆ ಪರಂಪರೆ ಜೀವಂತವಾಗಿ ಉಳಿದಿದೆ, ಬೆಳೆಯುತ್ತಿದೆ. ಈ ಕಾರ್ಯದಲ್ಲಿ ಅವರನ್ನು ತೊಡಗಿಸಲೆಂದೇ ಪ್ರಭುವು ಸಿದ್ಧರಾಮೇಶ್ವರರನ್ನು ಛೇಡಿಸಿದ್ದು, ಪೀಡಿಸಿದ್ದು, ಕೆಣಕಿದ್ದು.

ಡಾ॥ ಪಿ. ವಿ. ನಾರಾಯಣರಂತಹ ವಿದ್ವಾಂಸರು ಅವರಿಗೆ ಬರೆಯುವ ಪ್ರತಿಭೆ ಇದ್ದಾಗ, ಅದನ್ನು ಮಾಡಬೇಕೇ ಹೊರತು ಬಟ್ಟೆ ಒಗೆಯುವ ಕೆಲಸವನ್ನಲ್ಲ. ಆರೋ

ಗ್ಯಕ್ಕಾಗಿ ವ್ಯಾಯಾಮ ಮಾಡಬಹುದು, ವ್ಯಾಯಾಮವೆಂದು ಬಟ್ಟೆ ಒಗೆಯಬಹುದು. ತನ್ನ ಬಟ್ಟೆ ತಾನೇ ತೊಳೆದುಕೊಳ್ಳಬೇಕೆಂದು ಬಟ್ಟೆ ತೊಳೆಯಲೂಬಹುದು. ಆದರೆ ಆದನ್ನೇ ಪೂರ್ಣಾವಧಿ ಉದ್ಯೋಗವನ್ನಾಗಿ ಮಾಡಿಕೊಂಡರೆ ಅವರ ಪ್ರತಿಭೆ, ವಿದ್ಯೆ ಪರಿಶ್ರಮ ವ್ಯರ್ಥ ತಾನೆ ? ಅದೇ ದೃಷ್ಟಿಯಿಂದ ಪ್ರಭುಹೇಳಿದ್ದು "ನೀನು ಇಂಥ ಕೆಲಸಗಳಲ್ಲೇ ಸೀಮಿತನಾಗಬೇಡ" ಎಂದು.

ಈಗ ನಾವು ಅನೇಕ ಸ್ವಾಮಿಗಳನ್ನು ನೋಡುತ್ತೇವೆ. ಅವರು ಗುರುವಿನ-ಜಂಗಮರ ವೇಷವಾದ ಕಾವಿಯನ್ನು ತೊಟ್ಟು ಮಠಕ್ಕೆ ಅಧಿಕಾರಿಯಾಗುತ್ತಾರೆ. ಆದರೆ ಬರೀ ಇಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜು, ಪಾಲಿಟೆಕ್ನಿಕ್ ಕಾಪಿಟೇಷನ್ ಫೀ ಇವುಗಳ ಲೆಕ್ಕಾಚಾರದಲ್ಲೇ ದಿನವನ್ನೇನು ಆಯುಷ್ಯವನ್ನೇ ಕಳೆಯುತ್ತಾರೆ ಎಂದು ಕೊಳ್ಳಿ. ಸ್ವಧರ್ಮೀಯನೇ, ಇದ್ದರೂ ಹಣ ಕಡಿಮೆ ತಂದವನ ಬಗ್ಗೆ ಮನಸ್ಸನ್ನು ಕಲ್ಲು ಮಾಡಿಕೊಳ್ಳಬೇಕಾಗುತ್ತದೆ. ಕನ್ನಡಿಗರು ಕೊಡುವ ಮೊತ್ತ ಸಣ್ಣದು, ಇರಾನಿನವನು, ಅರೇಬಿಯಾದವರು ಹೇರಳ ಹಣ ಕೊಡುತ್ತಾರೆಂದು, ಕೇರಳೀಯರು ಪಂಜಾಬಿನವರು ಜಾಸ್ತಿ ಕೊಡುವರೆಂದು ಸ್ವಭಾಷೆ, ಸ್ವಧರ್ಮ ಮರೆತು ಬೇರೆಯವರಿಗೆ ಸೀಟು ಕೊಡುವ ಪ್ರಸಂಗ ಬರುತ್ತದೆ. ಇಷ್ಟಲ್ಲದೆ ಪರ್ಮಿಷನ್ ತಗೊಳ್ಳಲು ಹೇರಳವಾಗಿ ಲಂಚ ಕೊಡ ಬೇಕು. ಅಕ್ರಮಗಳನ್ನು ಮುಚ್ಚಲು ಲಂಚಕೊಡಬೇಕಾಗುತ್ತದೆ. ಅಧಿಕಾರಿಗಳನ್ನು ರಾಜಕಾರಣಿಗಳನ್ನು ಸದಾ ಓಲೈಸಬೇಕಾಗುತ್ತದೆ. ಇದನ್ನೆಲ್ಲ ಗುರು ಮಾಡಬಹುದೇ ? ನಿರ್ಭೀತನು, ನಿರಾವಲಂಬಿಯೂ, ಯಾರ ಹಂಗಿಲ್ಲದಂತೆ ಇರುವವನೂ ಆದ ತ್ಯಾಗಿಯೇ ಹೀಗಾದರೆ ಪ್ರಯೋಜನವೇನು ? ಗುರುವಿನ ಕರ್ತವ್ಯ ತಾನು ಪೂಜಾನುಷ್ಠಾನ ನಿರತ ನಾಗಿ, ಅಧ್ಯಯನ ಮಾಡಬೇಕು ; ಶಿಷ್ಯರಿಗೆ-ಅನುಯಾಯಿಗಳಿಗೆ ಬೋಧೆ ಮಾಡಬೇಕು, ಧರ್ಮಜ್ಞಾನ ನೀಡಬೇಕು ; ಅವರನ್ನು ಮುನ್ನಡೆಸಬೇಕು.

ಒಬ್ಬ ಶಿಕ್ಷಕ ಸರಿಯಾಗಿ ಪಾಠ ಮಾಡಬೇಕು. ಉಳಿದ ಸಮಯದಲ್ಲಿ ತನ್ನ ಹೊಲಕ್ಕೆ ಗಮನ ಕೊಡಬೇಕು. ಪಾಠವನ್ನೇ ಮಾಡದೆ, ಹೊಲದಲ್ಲಿ ಉತ್ತಮ ಬೆಳೆ ತೆಗೆದೆ ಎನ್ನುವುದು ವಂಚನೆಯಲ್ಲವೆ ? ಉತ್ತಮ ಒಕ್ಕಲಿಗನೇ ಆಗಿದ್ದಲ್ಲಿ ಶಿಕ್ಷಕನ ಕೆಲಸಕ್ಕೆ ರಾಜೀನಾಮೆ ಕೊಡಬೇಕು ಹೊಲವನ್ನೇ ನೋಡಿಕೊಳ್ಳಬೇಕು ಅವರವರು ತೊಟ್ಟ ವೇಷ, ಕೈಗೊಂಡ ಕಾಯಕಕ್ಕೆ ಪ್ರಾಮಾಣಿಕತೆ ತೋರಬೇಕೇ ವಿನಾ, ಅದಕ್ಕೆ ಹೊರ ತಾದುದನ್ನು ಮಾಡುವುದರಲ್ಲಿ ಅರ್ಥವಿಲ್ಲ. ಅದನ್ನೇ ಇಲ್ಲಿ ಸಿದ್ಧರಾಮೇಶ್ವರರಿಗೆ ಒತ್ತಿ ಒತ್ತಿ ಹೇಳುವುದು. "ಕರೆಯೋ ಒಡ್ಡರೆರೆಯನಂ" ಎಂದು ಸಿದ್ಧರಾಮೇಶ್ವರರ ಶಿಷ್ಯ ರಿಗೆ ಹೇಳಿ, ಕರೆಯಿಸುವಲ್ಲಿ ಧ್ವನಿಯಲ್ಲಿ ಅಹಂಕಾರ-ತಿರಸ್ಕಾರ ತೋರಿಕೆಗೆ ಕಂಡರೂ, ಅಂತರಂಗದಲ್ಲಿ ಅವಿರಲಿಲ್ಲ ಅವಿದ್ದವನು ಗುರುವೇ ಅಲ್ಲ. ಒಂದು ವೇಳೆ ನಿಜಕ್ಕೂ ಅಹಂಕಾರ-ತಿರಸ್ಕಾರವಿದ್ದರೆ ಪ್ರಭುದೇವರು ಸಿದ್ಧರಾಮೇಶ್ವರರನ್ನು ಸೋಲಿಸಿದ ಅಟ್ಟ

ಹಾಸ ಹೊಂದಿ, ಸೋಲಿಸಿದ ಗುರುತಾಗಿ ಏನಾದರೂ ಬಿರುದು ಬಾವಲಿ ಹಾಕಿಕೊಂಡು ಹೊರಡುತ್ತಿದ್ದರು. ಹಾಗೆ ಮಾಡದೆ ತಮ್ಮ ದಾರಿಗೆ ತಂದುಕೊಂಡು ಸಿದ್ಧರಾಮರನ್ನು ಕರೆದುಕೊಂಡು ಕಲ್ಯಾಣಕ್ಕೆ ಬರುತ್ತಾರೆ. "ಭವ ಸಾಗರದಲ್ಲಿರುವ ಜನರ ಬಗ್ಗೆ ಕಿಂಚಿತ್ತು ಅನುಕಂಪವನ್ನು ತೋರಿ, ಅವರ ಕಣ್ಣೀರು ಕಂಡು ಕರಗುವ ಸ್ವಭಾವವನ್ನೇ ಹೊಂದದ ಅಲ್ಲಮನು ಅದನ್ನು ತೊಡೆಯಲು ಪ್ರಯತ್ನಮಾಡುತ್ತಾನೆಯೆ ?" ಎಂದು ಆರೋಪಿ ಸಿದ್ಧಾರೆ ಡಾ॥ ಪಿ. ವಿ. ನಾರಾಯಣರು. ಇದಕ್ಕೆ ಒಂದು ವಚನವನ್ನು ಉಲ್ಲೇಖಿ ಸಿದ್ದಾರೆ. (ಹಿಂದೆ ಉಲ್ಲೇಖಿಸಲಾಗಿದೆ. ಆಕ್ಷೇಪ ಸಂಖ್ಯೆ 2.)

ಆ ವಚನದಲ್ಲಿ ಭವಜೀವಿಗಳ ಬಗ್ಗೆ ತಿರಸ್ಕಾರವಿಲ್ಲ, ಒಂದು ಬಗೆಯ ಆಶ್ಚರ್ಯ ವಿದೆ. ನೋಡಿ, ಎಷ್ಟೋ ಸಹಸ್ರಾರು ಜನರು ಕನ್ನಡ ಎಂ. ಎ. ಓದಿರುತ್ತಾರೆ. ಬಹು ಪಾಲು ಜನರು ಒಂದು ಉದ್ಯೋಗ ದೊರಕಿಸಿಕೊಂಡು, ಪಾಠ ಮಾಡುವುದರಲ್ಲೇ ತೃಪ್ತಿಪಟ್ಟುಕೊಂಡು, ಮದುವೆ-ಮಕ್ಕಳು-ಸುಖಜೀವನದಲ್ಲಿ ತೊಡಗುತ್ತಾರೆ. ಕೆಲ ವರು ಮಾತ್ರ ನಿರಂತರವಾದ ಅಧ್ಯಯನ, ಸಂಶೋಧನೆ, ಬರಹ, ಪ್ರಕಟಣೆಗಳಲ್ಲಿ ನಿರತರಾಗುತ್ತಾರೆ. ಜಗತ್ತಿಗೆ ಏನಾದರೂ ಕೊಟ್ಟು ಹೋಗುತ್ತಾರೆ. ಇವರಿಗೆ ಅನ್ನಿಸು ತ್ತದೆ. "ಅದೆಂತಹ ಜನರಪ್ಪ ಎಂ. ಎ. ಕನ್ನಡ ಓದಿ, ಉದ್ಯೋಗ ಪಡೆದರೆ ಮುಗಿ ಯಿತು ಎಂದುಕೊಳ್ಳುತ್ತಾರೆ. ಸ್ವಲ್ಪವೂ ಅಧ್ಯಯನ, ಬರಹ ರೂಢಿಸಿಕೊಳ್ಳುವುದಿಲ್ಲ ವಲ್ಲ. ಅದು ಹೇಗಾದರೂ ಬದುಕು ಕಳೆಯುತ್ತಾರೆ" ಎನ್ನಿಸುತ್ತದೆ. ತೀವ್ರವಾದ ಸಂಶೋಧನೆಯಲ್ಲಿ ತೊಡಗಿದ ವಿಜ್ಞಾನಿಗೆ 'ಸಹ ಬರೀ ಉಪಜೀವನದ ಸಾಧನವಾಗಿ ವಿಜ್ಞಾನವನ್ನು ಇಟ್ಟುಕೊಂಡವರನ್ನು ಕಂಡು ಅದೇ ಅಚ್ಚರಿಯಾಗುತ್ತದೆ.

ಬೆಳಗಿನಿಂದ ರಾತ್ರಿವರೆಗೂ, ಹುಟ್ಟಿನಿಂದ ಸಾವಿನವರೆಗೂ, ಉಣ್ಣುವುದು, ಉಡುವುದು, ತೊಡುವುದು, ದೇಹಾಲಂಕಾರ, ಮಜ, ಫ್ಯಾಷನ್, ಸಿನಿಮಾ ಇಂಥ ದರಲ್ಲೇ ಕಳೆಯುವ, ಸಾಹಿತ್ಯ-ಕಲೆ-ಧರ್ಮ ಯಾವ ಸಂಸ್ಕಾರವೂ ಇಲ್ಲದ ಜನರನ್ನು ಕಂಡಾಗ ವಿಚಾರಶೀಲರಿಗೆ ಆಶ್ಚರ್ಯವೆನಿಸುತ್ತದೆ. ಧ್ಯೇಯವಿಲ್ಲದ ಈ ಜೀವನ ಇವರಿಗೆ ಬೇಸರ ತರದೆ? ಎನಿಸುತ್ತದೆ. ಅದನ್ನೇ ಪ್ರಭುದೇವರು ಈ ವಚನದಲ್ಲಿ ಅಭಿ ವ್ಯಕ್ತಗೊಳಿಸಿದ್ದಾರೆ. ಮತ್ತು ಅಂಥಾ ಸ್ಥಿತಿಯ ಬಗ್ಗೆ ಮರುಕ ಹೊಂದಿಯೇ ಗೊಗ್ಗ ಯ್ಯನಿಗೆ ಉಪದೇಶ ಮಾಡಿದ್ದು. ಪ್ರಭುದೇವರು ಕಣ್ಣೀರನ್ನು ತೊಡೆಯಲು ಅನುಸ ರಿಸಿದ ವಿಧಾನ ಅಪರೂಪದ್ದು ಮತ್ತು ಪ್ರೌಢವೂ ಆಗಿದೆ. ವ್ಯಕ್ತಿ ಏಕೆ ದುಃಖಿಯಾಗು ತ್ತಾನೆ ? ಮುಖ್ಯ ಕಾರಣ ಅಜ್ಞಾನ. ಸೂಕ್ತವಾದ ಜ್ಞಾನವನ್ನು ಅಂದರೆ ಅರಿವನ್ನು ಹೊಂದಿದರೆ ಜೀವನವನ್ನು ಸರಳವಾಗಿ, ಸಮರ್ಥವಾಗಿ ಎದುರಿಸುವನು. ದುಃಖ ವೆಂಬ ರೋಗ ಬಂದಾಗ ಔಷಧಿ ಕೊಡುವ ವಿಧಾನವನ್ನು ಪ್ರಭು ಅನುಸರಿಸದೆ, ದುಃಖ ವೆಂಬ ರೋಗವೇ ಬರದಂತೆ ಆತ್ಮಬಲವೆಂಬ ರೋಗ ನಿರೋಧಕ ಶಕ್ತಿಯನ್ನು ವರ್ಧಿ

ಸುವ ಚಿಕಿತ್ಸೆ ಮಾಡುವುದನ್ನು ಕಾಣುತ್ತೇವೆ. ಉದಾಹರಣೆಗೆ ಮುಕ್ತಾಯಕ್ಕನ ಪ್ರಸಂಗ.

ಕಾಯಕ ಕುರಿತು

"ಅಲ್ಲಮನಿಗೆ ಕಾಯಕವು ಮಹತ್ವದ್ದಾಗಿ ತೋರುವುದಿಲ್ಲ ; ಕಾಯಕಕ್ಕಿಂತಲೂ ಜಂಗಮ ದಾಸೋಹವೇ ಮುಖ್ಯವೆಂಬಂತೆ ತೋರುತ್ತದೆ. 'ಮಾಟ' ಎಂಬ ಪದವನ್ನು ಶೂನ್ಯ ಸಂಪಾದನೆಕಾರ ಕಾಯಕ ಎಂಬರ್ಥದಲ್ಲಿ ತಪ್ಪಾಗಿ ಪರಿಭಾವಿಸಿದ್ದಾನೆ," (ಪುಟ 153) ಎನ್ನುತ್ತಾರೆ ಡಾ॥ ಪಿ. ವಿ. ನಾರಾಯಣರು.

ಕಾಯಕವನ್ನು ತಿರಸ್ಕರಿಸಿದ್ದನ್ನು, ಕಡೆಗಣಿಸಿದ್ದನ್ನು ಕೆಲವು ವಾಗದ್ವೈತಿಗಳು ಕಾಯಕವನ್ನು ಒಂದು ಉಪಾಧಿ ಎಂಬಂತೆ ಅಲ್ಲಗಳೆಯುವುದನ್ನು ಪ್ರಭುದೇವರಲ್ಲಿ ಎಲ್ಲಿಯೂ ಕಾಣುವುದಿಲ್ಲ,

ಪ್ರಭುವೇವರು ಕೈಗೊಂಡುದು ಒಂದು ಮಹತ್ತರ ಕಾಯಕ- ಜಂಗಮನ ಕಾಯಕ. ಶರೀರವನ್ನು ದುಡಿಸಿ ಮಾಡುವ ಪರಿಶ್ರಮ, ಬೌದ್ಧಿಕ ಅಂಗದಿಂದ ಮಾಡುವ ಬೋಧೆ, ಉಪನ್ಯಾಸ, ಹಣವನ್ನು ತೊಡಗಿಸಿ ಮಾಡುವ ವ್ಯಾಪಾರ– ವಾಣಿಜ್ಯ ಈ ಮೂರೂ ಕಾಯಕಗಳೆ. ಅಲ್ಲಮಪ್ರಭುದೇವರು ಅಳವಡಿಸಿಕೊಂಡುದು ಎರಡನೆಯದನ್ನು, ಅದೇ ಜಂಗಮನ ಕಾಯಕ. ಉಪಜೀವನದ ವಿದ್ಯೆ ಕಲಿಸುವವನು ಶಿಕ್ಷಕನಾದರೆ, ಜೀವನದ ವಿದ್ಯೆ ಕಲಿಸುವವನು ಗುರು (ಜಂಗಮ) ; ಅನುಭವ ಮಂಟಪದ ಶೂನ್ಯ ಪೀಠಾಧೀಶನಾಗಿ ಪ್ರಭುವು ಸಾಧಕರಿಗೆ ಮಾರ್ಗದರ್ಶನ ಮಾಡಿದುದು ಜಂಗಮನ ಕಾಯಕ.

'ಮಾಟ' ಪದವು ಕಾಯಕಕ್ಕಿಂತಲೂ ವಿಸ್ತಾರವಾದುದು. ಅದರಲ್ಲಿ ಕಾಯಕವು ಅಂತರ್ಗತವಾಗಿದೆ. ಶರಣನ ದಿನಚರಿಯಲ್ಲಿ ಕಾಯಕ-ದಾಸೋಹ-ಅರ್ಚನೆ-ಅನುಭವ ಗೋಷ್ಠಿ ಮಿಳಿತವಾಗಿರುತ್ತದೆ. ಇವೆಲ್ಲ ಸೇರಿದ ಜೀವನ ವಿಧಾನವನ್ನು **'ಮಾಟ'** ಪದ ಸಂಕೇತಿಸುತ್ತದೆ. ಶರಣನು ದಿನ ನಿತ್ಯ **ಕಾಯಕ** ಮಾಡಬೇಕು. ತನ್ನ ಗಳಿಕೆಯ ಒಂದು ಪಾಲನ್ನು ಸಮಾಜ–ಧರ್ಮಗಳ ಶ್ರೇಯಸ್ಸಿಗೆ ಬಳಸಲೇ ಬೇಕು. ಅದುವೇ **ದಾಸೋಹ.** ದಿನ ನಿತ್ಯವೂ ಪರಮಾತ್ಮನನ್ನು ಇಷ್ಟಲಿಂಗರೂಪದಲ್ಲಿ **ಅರ್ಚಿಸ**ಬೇಕು. **ಶರಣರ ಗೋಷ್ಠಿ**ಯಲ್ಲಿ ಬೆರೆಯಬೇಕು. ಇವೆಲ್ಲ ಸೇರಿದ್ದೇ 'ಮಾಟ'. ಇದರ ಮೂಲಕವೇ ದೇವರನ್ನೊಲಿಸಬೇಕು. "ಮಾಟವೇ ಕೂಟವಾಯಿತ್ತಯ್ಯ ಬಸವಣ್ಣಂಗೆ" ಎಂದು ಈ ದೃಷ್ಟಿಯಿಂದಲೇ ಅಕ್ಕಮಹಾದೇವಿ ಹೇಳಿರುವುದು. "ಮಾಡುವ ಮಾಟದಿಂದವೆ ಬೇರೊಂದನರಿಯಬೇಕು" ಎಂದು ಪ್ರಭುವಿನ ಮಾತಿನಲ್ಲೇ ಕಾಯಕಕ್ಕೂ ಮಹತ್ವದ ಸ್ಥಾನ ಸಿಕ್ಕಿದೆ, ದಾಸೋಹ, ಅರ್ಚನೆ, ಅನುಭಾವಗಳ ಮೂರು ಮಜಲಿನ 'ಮಾಟ'ದ ಕಟ್ಟಡ ನಿಂತಿರುವುದೇ ಕಾಯಕದ ಅಡಿಪಾಯದ ಮೇಲೆ ಎಂಬುದನ್ನರಿತಾಗ ತಪ್ಪು

ಅರ್ಥ ಮಾಡಿರುವವರು ಶೂನ್ಯ ಸಂಪಾದನೆಕಾರರಲ್ಲ ಡಾ॥ ನಾರಾಯಣರು ಎಂಬುದು ನಮಗೆ ಗೋಚರವಾಗದಿರದು.

ವಚನಕಾರರು – ಸಮಾಜಸುಧಾರಣೆ

1. ಒಟ್ಟು ನೋಡಿದಾಗ ವಚನಕಾರರು ಸಾಮಾಜಿಕ ಪರಿಷ್ಕರಣವನ್ನಾಗಲೀ ಆರ್ಥಿಕ ಪರಿಕಲ್ಪನೆಯನ್ನಾಗಲೀ, ರಾಜತ್ವವನ್ನಾಗಲೀ ಸ್ವತಂತ್ರ ಸ್ಥಿತಿಯಲ್ಲಿ ಆಲೋಚನೆ ಮಾಡದೆ ಎಲ್ಲವನ್ನೂ ಮತೀಯ ಹಿನ್ನೆಲೆಯಲ್ಲಿ ನೋಡಿದರು. ಏಕೆಂದರೆ ಅವರ ಉದ್ದೇಶ ಮತವೊಂದರ ಪ್ರಸಾರವೇ ವಿನಾ ಮತದಿಂದ ಮುಕ್ತವಾದ ಸ್ಥಿತಿಯಲ್ಲಿನ ಸಾಮಾಜಿಕ ಸುಧಾರಣೆಯಾಗಿರಲಿಲ್ಲ ಎಂಬ ಮಾತನ್ನು ಗಮನಿಸಬೇಕು. ಹಾಗಾಗಿಯೇ ವೀರಶೈವದಲ್ಲಿ ಮುಂದೆ ಮಿಕ್ಕೆಲ್ಲ ಮತಗಳಲ್ಲಿನ ಹಾಗೆಯೇ ವಚನಕಾರರು ಜಾರಿಗೆ ತಂದಿದ್ದ ಸುಧಾರಣೆಗಳೆಲ್ಲ ಸ್ಥಗಿತವಾದುವು. [ಪುಟ 99]
2. ಶರಣರ ಗಮನವಿದ್ದುದು ವೀರಶೈವ ವಲಯಕ್ಕೆ ಬಂದವರನ್ನು ಸಂಘಟಿಸುವುದರಲ್ಲಿ, ಹೊಸದಾಗಿ ಜನರನ್ನು ನೆಲೆಗೊಳಿಸುವಲ್ಲಿ ಅವರ ಆಸಕ್ತಿಯಿತ್ತೇ ಹೊರತು, ಇಪ್ಪತ್ತನೆಯ ಶತಮಾನದ ಸಾಮಾಜಿಕ ಸುಧಾರಣೆಯ ಕಲ್ಪನೆ ಅವರದಾಗಿರಲಿಲ್ಲ. [ಪುಟ 101]
3. ವಚನಕಾರರ ದೃಷ್ಟಿಯಲ್ಲಿ ಮಾನವ ಸಂಕುಲವೇ ಭಕ್ತ-ಭವಿ ಎಂದು ವಿಂಗಡಣೆಗೊಂಡಿದೆ. ಭವಿಗಳ ಬಗ್ಗೆ ಅವರ ಗಮನವಿಲ್ಲ ; ಭಕ್ತರಾದವರನ್ನು ಸಂಘಟಿಸುವುದೇ ಅವರ ಧ್ಯೇಯ. [ಪುಟ 102]
4. ವಚನಗಳ ಮೂಲನೆಲೆಯಾದ ಚಳುವಳಿಯು ಒಂದು ಮತೀಯ ಚಳುವಳಿ. ......ಹೀಗಾಗಿ ವಚನಕಾರರು ಸಾಮಾಜಿಕವಾಗಿ ಜಾರಿಗೊಳಿಸ ಬಯಸಿದ ಎಲ್ಲ ಸುಧಾರಣೆಗಳು ಆಧುನಿಕ ಅರ್ಥದಲ್ಲಿ ಸಮಾಜ ಸುಧಾರಣೆಯ ಕೆಲಸವಲ್ಲ. (ಪುಟ 91)
5. ವಚನಕಾರರು ಪರಿಷ್ಕರಿಸ ಹೊರಟಿದ್ದು ವಿಶಾಲ ಸಮಾಜವನ್ನಲ್ಲ; ತಮ್ಮ ಮತಕ್ಕೆ ಬಂದು ಸೇರಿಕೊಂಡ ಜನಗಳ ಸಂಘಟನೆಯನ್ನು (ಪುಟ 92)

ಈಗಾಗಲೇ ನಾನು ಜಾತಿ ಮತ ಧರ್ಮಗಳ ವ್ಯತ್ಯಾಸ ಕುರಿತು ಹೇಳಿದ್ದೇನೆ. ಅದ್ವೈತ, ದ್ವೈತ, ಶಕ್ತಿವಿಶಿಷ್ಟಾದ್ವೈತ, ಮುಂತಾದವು ಮತಗಳಾದರೆ ಲಿಂಗಾಯತ, ವೈದಿಕ, ಸಿಖ್ ಮುಂತಾದವು ಧರ್ಮಗಳಾಗುತ್ತವೆ. ಧರ್ಮ ಪದವು ಹಲವಾರು ಅರ್ಥಗಳನ್ನು ಒಳಗೊಂಡಿದ್ದರೂ, ಸಮಾಜವನ್ನು ಸಂಘಟಿಸುವ, ಸಂಸ್ಕರಿಸುವ ಸಾಧನವೇ ಧರ್ಮ. ವ್ಯಕ್ತಿಯನ್ನು–ಸಮಾಜವನ್ನು, ವ್ಯಷ್ಟಿಯನ್ನು–ಸಮಷ್ಟಿಯನ್ನು ಸರ್ವತೋಮುಖವಾಗಿ ಎತ್ತುವ ಸಾಧನವೇ ಧರ್ಮ. ಧರ್ಮವು ಒಂದು ವೃಕ್ಷವಾದರೆ ಇದರ ಅಂಗಗಳಾದ ಸಿದ್ಧಾಂತ (ಮತ) ಸಾಧನೆ, ದರ್ಶನ ಮುಂತಾದವು ಅದರ ಕೊಂಬೆಗಳು.

ಮೇಲೆ ಉಲ್ಲೇಖಿಸಿರುವ ಐದು ವಿಷಯಗಳ ಸಾರವು ಸುಮಾರಾಗಿ ಒಂದೆ ; ಶರಣರು ಮತೀಯ ಹಿನ್ನೆಲೆಯಲ್ಲಿ ಎಲ್ಲವನ್ನು ನೋಡಿದರು ವೀರಶೈವ ವಲಯಕ್ಕೆ ಬಂದವರನ್ನು ಸಂಘಟಿಸುವುದರಲ್ಲಿ ಮಾತ್ರ ಅವರಿಗೆ ಆಸಕ್ತಿ ಇತ್ತು. ಮಾನವ ಸಮಾಜವನ್ನು ಭವಿ-ಭಕ್ತ ಎಂಗು ವಿಂಗಡಿಸಿದರು. ಭವಿಗಳ ಬಗ್ಗೆ ಅವರಿಗೆ ಗಮನವಿರಲಿಲ್ಲ, ಮುಂತಾದ್ದು.

1. ಸಮಾನತೆ ಸಾಧಿಸಲು, ಸಂಸ್ಕಾರ ನೀಡಲು ಒಂದೊಂದು ದೇಶದಲ್ಲಿ ಒಂದೊಂದು ಕಾಲದಲ್ಲಿ ಯಾವುದಾದರೊಂದು ಸಾಧನವಾಗುತ್ತದೆ, ಹಾಗೆ ನೋಡಿದರೆ ಧರ್ಮವೇ ಎಲ್ಲೆಡೆಯಲ್ಲೂ ಆಗಿನೆ ಎಂದೂ ಹೇಳಬಹುದು. ಆದ್ದರಿಂದ ಧಾರ್ಮಿಕ ಚಟುವಟಿಕೆಯ ಮೂಲಕವೇ ಏನೇ ಸುಧಾರಣೆ ತರಬೇಕು. ಎಂಬಂತಹ ಕಾಲ 12 ನೇ ಶತಮಾನ. ವೈದಿಕ ಧರ್ಮ, ಧರ್ಮವನ್ನು ಧರ್ಮಶಾಸ್ತ್ರವನ್ನು ಹಿಡಿದುಕೊಂಡು ಸಮಾಜವನ್ನು ಹಂತಹಂತವಾಗಿ ಒಡೆಯಿತು. ಅದೇ ಧರ್ಮವನ್ನೇ ಸಾಧನವನ್ನಾಗಿ ಮಾಡಿ, ವೈದಿಕ ಧರ್ಮ ಸೃಷ್ಟಿಸಿದ್ದ ಕಟ್ಟುಪಾಡುಗಳನ್ನು ಒಡೆದು ಬಸವಣ್ಣನವರು ಸಮಾಜವನ್ನು ಒಂದುಗೂಡಿಸಿದರು. ಭಾರತದಲ್ಲಿ ಧರ್ಮದ ಅಸ್ತ್ರ ಹೊರತು ಮತ್ತೆ ಯಾವುದರಿಂದಲೂ ಸಂಘಟನೆ, ಸಂಸ್ಕಾರ ಸಾಧ್ಯವಿಲ್ಲವೆಂದೇ ಬೌದ್ಧ-ಜೈನ, ಸಿಖ್ ಧರ್ಮಗಳೂ ಹಾಗೇ ಪ್ರಯತ್ನಿಸಿದ್ದು, ಇಂದಿನ ಸಮಾನತೆಯ ಕಲ್ಪನೆ ಬೇರೆ ಇದೆ. ಬಸ್ಸು-ರೈಲುಗಳಲ್ಲಿ ಸಮಾನವಾಗಿ ಪಯಣಿಸುವ ಮೂಲಕ, ಹೋಟೆಲ್-ಬಾರ್‌ಗಳಲ್ಲಿ ಒಟ್ಟಾಗಿ ಕುಡಿಯುವ ಮೂಲಕ, ಕ್ಲಬ್ಬುಗಳಲ್ಲಿ ಸ್ತ್ರೀ ಪುರುಷರು ಯಾರ್‍ಯಾರೊಡನೆಯೋ ನರ್ತಿಸುವ ಮೂಲಕ ಯಾವ ಭೇದವಿಲ್ಲದೆ ಸಸ್ಯಾಹಾರಿಗಳು ಮಾಂಸಾಹಾರಿಗಳೊಡನೆ ಸೇರಿ ಮಾಂಸಾಹಾರ ಮಾಡುವ ಮೂಲಕ ಸಮಾನತೆ (?) ಸಾಧ್ಯವಿದೆ. ಇದಕ್ಕೆ ಧರ್ಮದ ಅಗತ್ಯವಿಲ್ಲ. ಈ ದೃಷ್ಟಿಯಲ್ಲಿ ಅಂದಿನ ಸಮಾಜ ನೋಡಿ ಶರಣರಿಗೆ ಮತೀಯ ದೃಷ್ಟಿ ಇತ್ತು ಎನ್ನಲಾಗದು.

ಒಬ್ಬ ಶಿಕ್ಷಕ ಊರೆಲ್ಲ ತಿರುಗಿ "ಯಾರೂ ನಿರಕ್ಷರಿಗಳಾಗಿ ಇರಬೇಡಿ, ದಯವಿಟ್ಟು ಶಾಲೆಗೆ ಬನ್ನಿ. ಸರಕಾರ ಎಷ್ಟೊಂದು ಯೋಜನೆ (ಕಾಗದದ ಮೇಲೆ) ಮಾಡಿದೆ ನೋಡಿ. ವಯಸ್ಕರಿಗೆ ವಯಸ್ಕರ ಶಾಲೆ (ಈಗ ಅವು ರದ್ದಾಗಿವೆ) ಮಕ್ಕಳಿಗೆ ಮಕ್ಕಳಶಾಲೆ (ಶಿಕ್ಷಕರು ಇಲ್ಲದಿದ್ದರೂ, ಪಾಠ ಮಾಡದೆ ಇದ್ದರೂ ಚಿಂತೆಯಿಲ್ಲ) ಇವೆ. ಕನಿಷ್ಠ ಶಿಕ್ಷಣವನ್ನಾದರೂ ಪಡೆಯಿರಿ" ಎಂದು ಪ್ರಚಾರ ಮಾಡಿ ಬರುವನು. ಆದರೆ ಅಲ್ಲೆಲ್ಲ ಪಾಠ ಮಾಡುವನೇ? ಇಲ್ಲ, ಯಾರು ಶಾಲೆಗೆ ಹೆಸರು ನೋಂದಾಯಿಸುವರೋ ಅವರಿಗೆ ಪಾಠ ಮಾಡುವನು. ಹಾಗೆಯೇ ಬಸವಣ್ಣನವರು ಓದಿಸುವ ಅಯ್ಯ (Teacher) ಬೋಧಿಸುವ ಜಂಗಮ (religious preacher) ಉಭಯತರನ್ನೂ ತರಬೇತಿಗೊಳಿಸಿದರು. ಅವರು ಪ್ರಚಾರ ಮಾಡುತ್ತ ಲೌಕಿಕ ವಿದ್ಯೆ-ಪಾರಮಾರ್ಥಿಕ ವಿದ್ಯೆಗಳ ಅಗತ್ಯವನ್ನು ಹೇಳುತ್ತಾ ಹೋದರು.

* ಅರಿದೊಡೆ ಶರಣ ಮರೆದೊಡೆ ಮಾನವ
ಮರೆಯದೆ ಪೂಜಿಸೋ ಕೂಡಲ ಸಂಗಮದೇವನ.

* ಎಲೆ ಎಲೆ ಮಾನವ ಅಳಿಯಾಸೆ ಬೇಡವೋ
ಕಾಡಬೆಳದಿಂಗಳು ಸಿರಿ ಸ್ಥಿರವಲ್ಲ
ಕೇಡಿಲ್ಲದ ಪದವೀಯನೀವ ಕೂಡಲ ಸಂಗಮದೇವನ
ಮರೆಯದೆ ಪೂಜಿಸು.

* ಮಧುರ ಗುಣವಾ ಇರುವೆ ಬಲ್ಲುದು,......
ಮಾನವನಾಗಿ ಹುಟ್ಟಿದ ಬಳಿಕ,
ಶಿವಜ್ಞಾನವನ್ನರಿಯದಿರ್ದಡೆ ಆ ಕಾಗೆ
ಕೋಳಿಗಳಿಗಿಂತ ಕರಕಷ್ಟಕಾಣಾ ಕಲಿದೇವರದೇವಾ.

ಧರ್ಮದ ಅಗತ್ಯ ಕುರಿತು, ಮಾನವ ಜೀವನದ ಗುರಿ ಕುರಿತು ಬೋಧೆ ಮಾಡಿ, ಯಾರು
ಧರ್ಮದೊಳಕ್ಕೆ ಬರುವರೋ ಅವರನ್ನು ಸಂಸ್ಕರಿಸಲು ಸಾಧ್ಯ. ವೈದ್ಯನು ಚಿಕಿತ್ಸಾ
ಲಯದೊಳಕ್ಕೆ ಬಂದವರಿಗೆ ಚಿಕಿತ್ಸೆ ಮಾಡಲು ಸಾಧ್ಯ. ರೋಗಿಗಳ ಬಗ್ಗೆ ತೀವ್ರತರ
ಅನುಕಂಪವಿದ್ದರೂ, ಎಲ್ಲೆಲ್ಲಿಯೋ ಚಿಕಿತ್ಸೆ ಮಾಡಲಾರನು. ಉಪನ್ಯಾಸಕನು ತರಗತಿ
ಯಲ್ಲಿ ಕುಳಿತವರಿಗೆ ಪಾಠ ಮಾಡಬಲ್ಲನೇ ಹೊರತು, ಶಾಲೆಗೇ ಬರದವರಿಗೆ ಮಾಡಲಾರ.
ದೀಕ್ಷಾ ಸಂಸ್ಕಾರದ ಮೂಲಕ ಧರ್ಮದೊಳಕ್ಕೆ ಪ್ರವೇಶಿಸಿದವರನ್ನು ಮಾತ್ರ ಧರ್ಮವು
ಸಂಸ್ಕರಿಸಬಲ್ಲದು. ಹೀಗೆ ಧರ್ಮಮಂದಿರದೊಳಕ್ಕೆ ಬಂದವ ಭಕ್ತ, ಹೊರಗಿರುವವ
ಭವಿ. ಭವಿಗಳ ಬಗ್ಗೆ ಗಮನವಿಲ್ಲ, ಆಸಕ್ತಿ ಇಲ್ಲ ಎಂಬ ಆರೋಪ ಸರಿಯಲ್ಲ. ಧರ್ಮ
ಗಳಲ್ಲಿ ಎರಡು ಬಗೆ. ಒಂದು ನೈಸರ್ಗಿಕ ಧರ್ಮ ಇನ್ನೊಂದು ಪ್ರಗತಿಪರ ಧರ್ಮ.
ಭಾರತದಲ್ಲಿ ವೈದಿಕ ಧರ್ಮ, ಭಾರತದ ಹೊರಗಿದ್ದ ಯಹೂದಿ ಧರ್ಮ ಹುಟ್ಟಿ
ನಿಂದಲೇ ಜಾತಿ-ಧರ್ಮಗಳು ನಿರ್ಧಾರವಾಗುವ ಸಮಾಜಶಾಸ್ತ್ರ ಪ್ರತಿಪಾದಿಸಿದವು.
ಆದರೆ, ಸುಧಾರಣಾ ಧರ್ಮಗಳು ಮುಖ್ಯವಾಗಿ ಜನರನ್ನು ಆಕರ್ಷಿಸುವ ಉದ್ದೇಶವನ್ನೇ
ಹೊಂದಿದವು. ಭಾರತದ ಹೊರಗೆ ಕ್ರೈಸ್ತ-ಇಸ್ಲಾಂ ಧರ್ಮಗಳು, ಭಾರತದ ಒಳಗೆ
ಬೌದ್ಧ-ಜೈನ, ಲಿಂಗಾಯತ-ಸಿಖ್ ಧರ್ಮಗಳು ಇಂಥ ಪ್ರಗತಿಪರ, ಸುಧಾರಣಾತ್ಮಕ
ಮನೋಭಾವದ ಮಿಶನರಿ ಧರ್ಮಗಳು. ಬಸವಣ್ಣನವರು ಧರ್ಮದ ಬಾಗಿಲನ್ನು,
ಮೋಕ್ಷಮಂದಿರದ ಬಾಗಿಲನ್ನು ಎಲ್ಲರಿಗೂ ತೆರೆದರು. ಹೀಗಾಗಿ ಭವಿಗೆ ಧರ್ಮದ
ಬಾಗಿಲು ಸದಾ ತೆರೆದಿರುತ್ತದೆ ; ಅವನನ್ನು ಭಕ್ತನನ್ನಾಗಿ ಮಾಡುವ ಕಳಕಳಿಯನ್ನು
ವಚನಗಳಲ್ಲಿ ಸ್ಫುಟವಾಗಿ ಕಾಣಬಹುದು ಹುಟ್ಟಿನಿಂದಲೇ ಒಬ್ಬನ ಧರ್ಮ ನಿರ್ಧಾರವಾಗಿ
ಭವಿಗೆ ಭಕ್ತನಾಗುವ ಅವಕಾಶವನ್ನು ನಿರಾಕರಿಸಿದ್ದರೆ ಆಗ ನಾರಾಯರು ಶಣರಿಗೆ
ಆರೋಪ ಹೊರಿಸಲು ಅವಕಾಶವಿತ್ತು.

ಲೋಹ ಪರುಷವ ಮುಟ್ಟುವುದಲ್ಲದೆ
ಪರುಷ ಪರುಷವ ಮುಟ್ಟುವುದೇ ಅಯ್ಯಾ ?
ಅಂಗವಿಡಿದಂತೆ ಪ್ರಸಾದವಲ್ಲದೆ
ಲಿಂಗವಿಡಿದಂಗೆ ಪ್ರಸಾದವೆಲ್ಲಿಯದೋ ? (ಬ.ಷ.ವ 838)

ಎಲ್ಲವೋ ಎಲ್ಲವೋ ಪಾಪಕರ್ಮವ ಮಾಡಿದವನೇ
ಎಲವೋ ಎಲವೋ ಬ್ರಹ್ಮಹತ್ಯವ ಮಾಡಿದವನೇ
ಒಮ್ಮೆ ಶರಣೆನ್ನೆಲವೋ ! (ಬ.ಷ.ವ 619)

ಮೇಲಿನ ವಚನದಲ್ಲಿ ಭವಿಯನ್ನು ದೂರವಿರಿಸಬಾರದು, ಅವನಿಗೇ ಭಕ್ತಿಯ ಅವಶ್ಯಕತೆ ಇದೆ ಎಂದರೆ, ಅವನಿಗಿಂತಲೂ ಹೀನನಾದ ಪಾಪಿಗೆ ಸಹ ಅನುಕಂಪ ತೋರಿಸುವರು, ಎರಡನೆ ವಚನದಲ್ಲಿ. ಭವಿಯು ಧರ್ಮರಹಿತನಾದರೆ, ಪಾಪ ಕರ್ಮಿ ಅಧರ್ಮಿ. ಅವರು ಉಭಯತರ ಬಗ್ಗೆಯೂ ಶರಣರಿಗೆ ಕಾಳಜಿ ಇರುವುದು. ಭವಿಯ ಬಗ್ಗೆ ಅನುಕಂಪವಿರುವುದೇ ವಿನಾ ತಿರಸ್ಕಾರವಿರದು, ವೈದ್ಯನಿಗೆ ರೋಗಿಯ ಬಗ್ಗೆ ಅನುಕಂಪವಿರುವಂತೆ. ಇದೇ, "ದಯವಿಲ್ಲದ ಧರ್ಮವದೇವುದಯ್ಯಾ ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ, ದಯವೇ ಧರ್ಮದ ಮೂಲವಯ್ಯ" ಎಂಬ ವಚನದಲ್ಲಿ ವ್ಯಕ್ತವಾಗಿದೆ.

ಇಷ್ಟಲಿಂಗಧಾರಣೆ ಇಂದು ಜಾತಿವಾಚಕ ಆಚರಣೆಯಾಗಿದೆ, ಅದು ಅಂದು ತತ್ತ್ವವಾಚಕ ಆಚರಣೆಯಾಗಿದ್ದಿತು. ಕರ್ತನೊಬ್ಬನನ್ನು ಒಪ್ಪಿ, ಮನುಷ್ಯರೆಲ್ಲರ ಸಹೋದರತ್ವ ಒಪ್ಪಿ, ವರ್ಣ-ವರ್ಗ-ಜಾತಿ-ಲಿಂಗ ಭೇಧ ಮನ್ನಿಸದೆ ಗುಣಕ್ಕೆ ಮನ್ನಣೆ ಕೊಡುತ್ತೇವೆ ಎಂದು ಪ್ರತಿಜ್ಞಾಬದ್ಧರಾದ ಜನ ದೇವನ ಕುರುಹಾದ ಇಷ್ಟಲಿಂಗ ಧರಿಸುತ್ತಿದ್ದರು. ಹೇಗೆ ಸಾಮ್ಯವಾದಿ ವಿಚಾರ ಒಪ್ಪಿದವರೆಲ್ಲ ಕಾಮ್ರೇಡರೊ ಹಾಗೆ ಇಷ್ಟಲಿಂಗಧಾರಿಗಳೆಲ್ಲ ಶರಣ ಬಂಧುಗಳು. ಇಂಥ ಉದಾತ್ತ ಉದ್ದೇಶದಿಂದ 'ಕಲ್ಯಾಣ ರಾಜ್ಯ' ಎಂಬ ನವಸಮಾಜವೊಂದನ್ನು ಶರಣರು ಕಟ್ಟಲು ಬಯಸಿದರು, ಸಾಕಷ್ಟು ಯಶಸ್ವಿಯೂ ಆದರು.

ಈ ಚಳುವಳಿ ಕಾಲಾನಂತರ ಸ್ಥಗಿತವಾದುದು, ನಾರಾಯಣರ ಊಹೆಯಂತೆ, ಮತೀಯ ಕಾರಣಕ್ಕಾಗಿ ಅಲ್ಲ(ಪುಟ 99). ಈ ದೇಶದಲ್ಲಿ ಯಾವುದೇ ಪ್ರಗತಿಗೆ ಆಸ್ಪದ ವೀಯುವ ಚಳುವಳಿಯನ್ನು ಉಳಿಯಗೊಡದೆ ಹತ್ತಿಕ್ಕುವ ಬಲಿಷ್ಠ ಶಕ್ತಿ ಇದೆ. ಅದುವೇ ಪುರೋಹಿತಶಾಹಿ. ಇದು ಜಡಗಟ್ಟಿದ ವ್ಯವಸ್ಥೆ, ಮುಡುಗಟ್ಟಿದ ಮೌಢ್ಯತೆ ಹಾಗೇ ಉಳಿಯಬೇಕೆಂದು ಅಪೇಕ್ಷಿಸುತ್ತದೆ. ಯಾರೇ ಹುಟ್ಟಿ ಬದಲಾವಣೆ ತರುತ್ತೇವೆಂದರೆ ತಪ್ತಗೊಂಡು ಎದ್ದುನಿಲ್ಲುತ್ತದೆ; ಹುಟ್ಟಿದ ಚಳುವಳಿಗೆ ಕುತ್ತಿಗೆ ಹಿಚುಕಲು ಹೊಂಚು ಹಾಕುತ್ತಿರುತ್ತದೆ. ಕೆಲವರು ಒಳಗೆ ಪ್ರವೇಶಿಸಿ ಅಲ್ಲಿಂದ, ಮತ್ತೆ ಕೆಲವರು ಹೊರಗಿನಿಂದ ಹಿಚುಕುತ್ತಾರೆ. ಒಂದೋ ಹೊಸ ವಿಚಾರಧಾರೆ ಬೌದ್ಧ ಧರ್ಮದಂತೆ ಪಲಾಯನ

ಮಾಡಬೇಕು; ಇಲ್ಲವೇ ಜೈನ ಧರ್ಮಗಳು ಈಗಿರುವಂತೆ ಆದಿಯಲ್ಲಿ ಹೊಂದಿದ್ದ ತೀವ್ರತೆ ಪ್ರಖರತೆ ಕಳೆದುಕೊಂಡು ದನಿಸತ್ತು, ಪುನಃ ಹಳೆಯಕೊಳೆಯನ್ನು ತುಂಬಿಕೊಂಡು, ರಾಜಿ ಮಾಡಿಕೊಂಡು ಸ್ವಂತಿಕೆ ಕಳೆದುಕೊಂಡು ಬದುಕಬೇಕು. ಭಾರತದ ಧಾರ್ಮಿಕ ಇತಿಹಾಸ ಗೊತ್ತಿರುವ ಎಲ್ಲರಿಗೂ ಇದು ತಿಳಿದ ಸಂಗತಿಯಾಗಿದ್ದೂ ನಾರಾಯಣರು, ತನ್ನ ಮತೀಯ ದೃಷ್ಟಿಕೋನದಿಂದಾಗಿ ಶರಣರ ಚಳುವಳಿ ಸ್ಥಗಿತಗೊಂಡಿತು ಎಂದು ವಿಶ್ಲೇಷಿಸಿರುವುದು ತಪ್ಪು.

ಸಮಾಜ ಸುಧಾರಣೆ ಇಂದು — ಅಂದು

ಶರಣರ ಗಮನವಿದ್ದುದು ವೀರಶೈವ ವಲಯಕ್ಕೆ ಬಂದವರನ್ನು ಸಂಘಟಿಸುವುದಿತ್ತು. ಹೀಗಾಗಿ ವಚನಕಾರರು ಸಾಮಾಜಿಕವಾಗಿ ಜಾರಿಗೊಳಿಸಬಯಸಿದ ಎಲ್ಲ ಸುಧಾರಣೆಗಳು ಆಧುನಿಕ ಅರ್ಥದಲ್ಲಿ ಸಮಾಜ ಸುಧಾರಣೆಯ ಕೆಲಸವಲ್ಲ (101.91) ಎಂದಿದ್ದಾರೆ ಡಾ॥ ಪಿ. ವಿ. ನಾರಾಯಣರು. ಆಧುನಿಕ ಅರ್ಥದಲ್ಲಿ ಯಾವುದನ್ನು ಸುಧಾರಣೆ ಎಂದು ತಾವು ತಿಳಿದಿದ್ದಾರೋ ವಿವರಿಸಿದ್ದರೆ ಚೆನ್ನಾಗಿತ್ತು. ಬಸವಾದಿ ಪ್ರಮಥರು ಬಳಕೆಗೆ ತಂದ ಕೆಲವು ಸುಧಾರಣೆ ನೋಡೋಣ.

1. ಗಂಡಸತ್ತ ಮಹಿಳೆ ಕೇಶಮುಂಡನ ಮಾಡಿಸಿಕೊಂಡು, ಬಳೆ-ಓಲೆ-ಮೂಗುತಿ ತೆಗೆಯಬೇಕಿತ್ತು. ಇವಾವೂ ಅಗತ್ಯವಿಲ್ಲ ಎಂದು ಉಳಿಸಿಕೊಂಡುದು ಸುಧಾರಣೆಯಲ್ಲವೆ ?
2. ಬಹಿಷ್ಠೆಯಾದವಳು ಹೊರಗೆ ಕೂಡ್ರುಬೇಕಿತ್ತು ; ಈ ರಜಸ್ಸೂತಕ ಆಚರಣೆ ನಿಲ್ಲಿಸಿದ್ದು ಸುಧಾರಣೆಯಲ್ಲವೆ ?
3. ಹೆಂಡತಿ ಸತ್ತ ಗಂಡಸು ಪುನರ್ವಿವಾಹವಾಗಬಹುದಾದರೆ, ಗಂಡಸತ್ತ ಮಹಿಳೆಯೂ, ಅಪೇಕ್ಷೆ ಇದ್ದರೆ ಪುನರ್ವಿವಾಹವಾಗಬಹುದೆಂದುದು, ಅದು ಇಂದಿಗೂ ಲಿಂಗಾಯತ ಸಮಾಜದಲ್ಲಿ ಆಚರಣೆಯಲ್ಲಿರುವುದು ಸುಧಾರಣೆಯಲ್ಲವೆ ?
4. ಮನುಷ್ಯ-ಮನುಷ್ಯನನ್ನು ಮುಟ್ಟಿದರೆ ಮೈಲಿಗೆಯಾಗುವುದೆಂಬ ಜಾತಿಸೂತಕ ತೊಡೆದು, ಅಸ್ಪೃಶ್ಯತೆಯ ಆಚರಣೆಯನ್ನು ತೊಡೆದುಹಾಕಿದುದು ಸುಧಾರಣೆಯಲ್ಲವೆ ?
5. "ಹೆಣ್ಣಿಗೆ ಪತಿಯೇ ಪರದೈವ; ಮದುವೆಯ ಹೊರತು ಅನ್ಯಮಾರ್ಗವಿಲ್ಲ ಅವನ ಕೈಯಲ್ಲಿ ಬಡಿಸಿಕೊಂಡು ಸತ್ತರೂ ಚಿಂತೆಯಿಲ್ಲ" ಎಂಬ ಸಾಂಪ್ರದಾಯಿಕ ಮನೋಭಾವ ತೊಡೆದು, ತನ್ನ ಆಸೆ-ಆಕಾಂಕ್ಷೆ-ಶಕ್ತಿಗನುಸಾರವಾಗಿ ಮಹಿಳೆಯು ತನ್ನ ದಾರಿಯನ್ನು ಗುರುತಿಸಿಕೊಳ್ಳಬಹುದು ಎಂದು ಸ್ವಾವಲಂಬನೆಗೆ ಅವಕಾಶ ಮಾಡಿಕೊಟ್ಟುದು ಸುಧಾರಣೆಯಲ್ಲವೆ ?

6. ಎಂ. ಎ, ಎಂ. ಎಸ್‌ಸಿ, ಪಿಹೆಚ್. ಡಿ ಮಾಡಿಕೊಂಡು ಇನ್ನೂ ಜ್ಯೋತಿಷ್ಯ, ಪಂಚಾಂಗ, ರಾಹುಕಾಲ ಎಂದು ಜೋತು ಬೀಳುವ ಇಪ್ಪತ್ತನೇ ಶತಮಾನದ ವಿದ್ಯಾವಂತ ಹಿಂದುಗಳನ್ನು ನೋಡಿದರೆ, 8 ಶತಮಾನಗಳ ಹಿಂದೆಯೇ ಇವನ್ನೆಲ್ಲ ಧಿಕ್ಕರಿಸಿದ ಶರಣರದು ಸುಧಾರಣೆಯಲ್ಲವೆ ?

ಸುಧಾರಣೆಯ ಹೆಸರಿನಲ್ಲಿ ಇಂದು ಆಗುತ್ತಿರುವ ಬದಲಾವಣೆ ಉತ್ತಮ ಮೌಲ್ಯಗಳನ್ನು, ನಂಬಿಕೆಗಳನ್ನು ಕೊಂದು ಹಾಕುತ್ತಿದ್ದರೆ, ಬಸವಾದಿ ಪ್ರಮಥರ ಸುಧಾರಣೆ ನೀತಿವಂತ, ಜ್ಞಾನಾತ್ಮಕ, ತತ್ತ್ವನಿಷ್ಠ, ಪ್ರಗತಿಪರ ಚಿಂತನೆಯ ಜೀವಂತ ಸಮಾಜವನ್ನು ಕಟ್ಟಿತು.

'ವಚನ–ನಿರ್ವಚನ' ಕೃತಿಯಲ್ಲಿ ವಿಮರ್ಶಿಸಬಹುದಾದ ತಾತ್ತ್ವಿಕ ದೋಷಗಳು ಸಾಕಷ್ಟು ಇವೆ. ಅಲ್ಲಮಪ್ರಭುದೇವರ ದೃಷ್ಟಿಕೋನ, ಕಾಯಕ ಕುರಿತು ಅವರ ಭಾವನೆ, ಕಾಯಕ ಸಿದ್ಧಾಂತದ ಬಗ್ಗೆ ತಪ್ಪು ತಿಳುವಳಿಕೆ– ಮುಂತಾದವು ವಿಮರ್ಶೆಗೆ ಅರ್ಹವಾಗಿದ್ದರೂ ಈಗಾಗಲೇ ಲೇಖನವು ಬೆಳದ ಗಾತ್ರವನ್ನು ಗಮನಿಸಿಯೂ, ನನಗೆ ಸಮಯದ ಅಭಾವವಿರುವುದರಿಂದಲೂ ಇಲ್ಲಿಗೆ ಪೂರ್ಣವಿರಾಮ ನೀಡಲು ಬಯಸಿದ್ದೇನೆ. ಒಂದು ಕಡೆ ತೊಟ್ಟಿಲು ತೂಗಿ, ಇನ್ನೊಂದು ಕಡೆ ಮಗುವನ್ನು ಚಿವುಟಿ ಎಬ್ಬಿಸುವ ತಂತ್ರಗಳೂ ಅಲ್ಲಲ್ಲೇ ಕಾಣಬರುತ್ತಿವೆ.

ಹೀಗೆ ತಪ್ಪುತಪ್ಪಾಗಿ ಬಸವಾದಿ ಪ್ರಮಥರ, ಇನ್ನಿತರ ಶರಣರ ಬದುಕು. ಬರಹ, ನಿಲುವುಗಳನ್ನು ಕುರಿತು ಪ್ರಾಮಾಣಿಕ ಚಿತ್ರಣ ನೀಡದ, ಅಪಪ್ರಚಾರವನ್ನೇ ಮಾಡುವ ವಚನ-ನಿರ್ವಚನ "ಬಸವ ಪುರಸ್ಕಾರಕ್ಕೆ ಖಂಡಿತವಾಗಿಯೂ ಅರ್ಹವಾಗಿಲ್ಲ. ಮೊದಲ ಲೇಖನ 'ವಚನ ಸಾಹಿತ್ಯದ ಸ್ವರೂಪ ಮತ್ತು ಜಾಗತಿಕ ಸಾಹಿತ್ಯಕ್ಕೆ ಅದರ ಕೊಡುಗೆ' ಮತ್ತು ಏಳನೆಯ ಲೇಖನ 'ಬಸವಣ್ಣನವರ ವಚನಗಳಲ್ಲಿ ಸ್ಥಾವರ-ಜಂಗಮ ಪರಿಕಲ್ಪನೆ' ಎಂಬುವು ಉತ್ತಮ ಲೇಖನಗಳು ಎಂಬ ಅಭಿಪ್ರಾಯಕ್ಕೆ ಪಾತ್ರವಾಗಬಲ್ಲದಾದರೂ, ಪುಸ್ತಕದ ತುಂಬ ಇನ್ನಿತರ ಲೇಖನಗಳಲ್ಲಿ ಪೂರ್ವಾಗ್ರಹಪೀಡಿತ ಅಭಿಪ್ರಾಯ, ಅಪ್ರಬುದ್ಧ ವಿಶ್ಲೇಷಣೆಯ, ಒಂದು ಬಗೆಯ ಸೂಕ್ಷ್ಮ ಅಸಹನೆ-ಅಗೌರವ ಶರಣರ ಬಗ್ಗೆ ಹರಿದಾಡಿರುವುದರಿಂದ ಪ್ರತಿಷ್ಠಿತ ಬಸವ ತತ್ತ್ವಪ್ರಚಾರಕ ಸಂಸ್ಥೆಯಾದ ಬಸವ ಸಮಿತಿ ಈ ಕೃತಿಗೆ 'ಬಸವ ಪುರಸ್ಕಾರ' ನೀಡುವ ಪ್ರಮಾದ ಮಾಡಬಾರದೆಂಬುದೇ ನಮ್ಮ ಕಳಕಳಿಯ ಸೂಚನೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ,

ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ,

★ ✣✣✣✣✣✣ ★

ಆಗಸ್ಟ್-ಸೆಪ್ಟಂಬರ್ ತಿಂಗಳಲ್ಲಿ ವಿವಿಧ ಯೋಜನೆಗಳಿಗೆ ನೆರವು ನೀಡಿದ ದಾಸೋಹಿಗಳು.

ಬಸವ ಧರ್ಮ ಪೀಠದ ಕಟ್ಟಡನಿಧಿಗೆ.

ಶರಣರುಗಳಾದ :

1.	ರಾವ್ ಸಾಹೇಬ್ ಬಾಪೂ ಸಾಹೇಬ ಕಿತ್ತೂರ್‌ಕರ್ ಗಡಹಿಂಗ್ಲಾಜ್, ಮಹಾರಾಷ್ಟ್ರ (ಒಂದು ಕೋಣೆ ನಿರ್ಮಾಣಕ್ಕೆ)	40,001-00
2.	ವಿಲಾಸ್, ಎಸ್. ಬಾಗಿ. ಗಡಹಿಂಗ್ಲಾಜ್, ಮಹಾರಾಷ್ಟ್ರ (ಒಂದು ಕೋಣೆ ನಿರ್ಮಾಣಕ್ಕೆ)	40,001.00
3.	ಲಕ್ಷ್ಮಿ. ಟಿ. ಪ್ರಕಾಶ್ ಮಾನು, ನಾರಾಯಣಪುರ	40001.00
4.	ವಿಜಯ ಬಾಬುರಾವ್ ತೇಲಂಗ, ಗಡಹಿಂಗ್ಲಾಜ್	5001-00
5.	ಅಪ್ಪಾಸಾಹೇಬ ಶಿವಪುತ್ರಪ್ಪ ದಡ್ಡಿ. ಗಡಹಿಂಗ್ಲಾಜ್	5001.00
6.	ಚಂಬಣ್ಣ ದುಂಡಪ್ಪ ಪಟ್ಟಣ ಶೆಟ್ಟಿ, ಗಡಹಿಂಗ್ಲಾಜ್	5001-00
7.	ಮಲ್ಲಪ್ಪ ರಾಮಪ್ಪ ನೇವಡೆ, ಗಡಹಿಂಗ್ಲಾಜ್	5001-00
8.	ಬಾಬುರಾವ್ ಈಶ್ವರಪ್ಪ ಬೆಳಗುದರೆ, ಗಡಹಿಂಗ್ಲಾಜ್	5001-00
9.	ಬಾಬೂಸಾಹೇಬ ರಾಮಚಂದ್ರ ಯಲಾಬು, ಗಡಹಿಂಗ್ಲಾಜ್	5001-00
10.	ಕಲ್ಲೂರು ಮಹಾನಂದೆಪ್ಪ ಚೇಳಗುರ್ಕಿ, ನಾರಾಯಣಪುರ	5001-00
11.	ಶಿವಗೌಡ-ಶಿವಮೂರ್ತಿಪಾಟೀಲ, ಗಡಹಿಂಗ್ಲಾಜ್	3001-00
12.	ರಮೇಶ ಮಠಪತಿ. ನಾರಾಯಣಪುರ	1001-00
13.	ಸುರೇಶ್ ಮತ್ತು ಅಶೋಕ ಕಲ್ಲಪ್ಪ ಶಿಂತ್ರೆ, ಗಡಹಿಂಗ್ಲಾಜ್	555-00

ಕೂಡಲ ಸಂಗಮದಲ್ಲಿ ನಡೆಯುವ ನಿತ್ಯ ದಾಸೋಹ ಯೋಜನೆಗೆ 1111–00 ರೂ ಕೊಟ್ಟವರು

ಶರಣರುಗಳಾದ :

806 ಈಶ್ವರ ಶಂಕರ ಮೂರ್ತಿ, ಸಂಕೇಶ್ವರ.
807 ಮಲ್ಲಪ್ಪ ರಾಮಪ್ಪ ನೇವಡೆ. ಗಡಹಿಂಗ್ಲಾಜ್
808 ಬಾಬೂರಾವ ಈಶ್ವರಪ್ಪ ಬೆಳಗುದರಿ, ಗಡಹಿಂಗ್ಲಾಜ್
809 ಪ್ರೇಮಾ ಬಸವರಾಜು ಗಡವಿ, ಗಡಹಿಂಗ್ಲಾಜ್
810 ಶಿವಲಿಂಗಪ್ಪ ಸಾತಪ್ಪ ಮೂರ್ತಿ, ಗಡಹಿಂಗ್ಲಾಜ್
811 ಶಿವಯೋಗಪ್ಪ ನಾಗಪ್ಪ ಪಟ್ಟಣಶೆಟ್ಟಿ, ಗಡಹಿಂಗ್ಲಾಜ್
812 ದುಂಡಯ್ಯ ಮಲ್ಲಯ್ಯ ಮಠಪತಿ, ಗಡಹಿಂಗ್ಲಾಜ್

813 ಬಾಪೂಸಾಹೇಬ ಅಪ್ಪಾಸಾಹೇಬ ಪಾಟೀಲ, ಔರನಾಳ
814 ರಾವ್‌ಸಾಹೇಬ ಶಂಕರಪ್ಪ ಶ್ರೇಷ್ಠಿ, ಗಡಹಿಂಗ್ಲಾಜ್
815 ಕಾಶೀನಾಥ ಬಾಪೂಸಾಹೇಬ ಕಿತ್ತೂರಕರ್, ಗಡಹಿಂಗ್ಲಾಜ್
816 ಅಪ್ಪಣ್ಣ ಶಿವಣ್ಣ ಧಾಕೋಜಿ, ಗಡಹಿಂಗ್ಲಾಜ್
817 ದುಂಡವ್ವ ಮಹಾಲಿಂಗಪ್ಪ ಕೊಲ್ಲಾಪುರೆ, ಗಡಹಿಂಗ್ಲಾಜ್
818 ಮಲ್ಲಪ್ಪ ರಾಯಪ್ಪ ಬಂಡಿ, ಗಡಹಿಂಗ್ಲಾಜ್
819 ಸಾತಗೊಂಡ ಸೋಮಗೊಂಡ ಪಾಟೀಲ, ಗಡಹಿಂಗ್ಲಾಜ್
820 ಶ್ರೀಕಾಂತ್ ಸದಾಶಿವ ಮಹಾಜನ್, ಗಡಹಿಂಗ್ಲಾಜ್
821 ಶಿವಾಜಿರಾವ್ ಆರ್. ಪಾಟೀಲ, ಬಡಗಾಂವ
822 ನಾನಾಸಾಹೇಬ ಬಾಪೂಸಾಹೇಬ ಕಿತ್ತೂರಕರ, ಗಡಹಿಂಗ್ಲಾಜ್
823 ಸದಾನಂದ ಗಟ್ಟಿಗಪ್ಪ ಮಜತಿ, ಗಡಹಿಂಗ್ಲಾಜ್
824 ಸಿ. ಎಸ್. ಹಿರೇಮಠ, ಗಡಹಿಂಗ್ಲಾಜ್
825 ನೀಲವ್ವ ವೀರಪ್ಪ ಜೋಂಡಾ, ಗಡಹಿಂಗ್ಲಾಜ್
826 ಶಕುಂತಲಾ ಅಶೋಕ ವಾಲಿಶೆಟ್ಟಿ, ಗಡಹಿಂಗ್ಲಾಜ್
827 ಸುಲೋಚನಾ ಪ್ರದೀಪ ಕೋಳೆ, ಗಡಹಿಂಗ್ಲಾಜ್
828 ಶಂಕರಪ್ಪ ಬೆಳಗುದರಿ, ಗಡಹಿಂಗ್ಲಾಜ್
829 ಶಂಕರಪ್ಪ ಶಿವಲಿಂಗಪ್ಪ ಜಮದಾಳೆ, ಗಡಹಿಂಗ್ಲಾಜ್
830 ಮೃತ್ಯುಂಜಯ ಬಾಪೂಸಾಹೇಬ ಕಿತ್ತೂರಕರ್, ಗಡಹಿಂಗ್ಲಾಜ್
831 ಗಂಗವ್ವ ಈಶ್ವರಪ್ಪ ಚೌಗಲೆ, ಗಡಹಿಂಗ್ಲಾಜ್
832 ಬಂಗಾರವ್ವ ಕಲ್ಲಪ್ಪ ಕದಲಗಿ, ಗಡಹಿಂಗ್ಲಾಜ್
833 ಭೀಮರಾವ ದುಂಡಪ್ಪ ಮಾನೆ, ಗಡಹಿಂಗ್ಲಾಜ್
834 ಸಂಗೀತಾ–ಸುರೇಖಾ ಹಂಜಿ, ಗಡಹಿಂಗ್ಲಾಜ್
835 ವೀರಭದ್ರಪ್ಪ ಕಲ್ಲಪ್ಪ ತೋರಗಲ್ಲಿ, ಗಡಹಿಂಗ್ಲಾಜ್
836 ಪ್ರದೀಪ ಗಂಗಾಧರ ಕರಂಬಳ್ಳಿ, ಗಡಹಿಂಗ್ಲಾಜ್
837 ಜಿ. ಜಿ. ಪ್ರಸಾದಿ, ಗಡಹಿಂಗ್ಲಾಜ್
838 ಮಹಾದೇವಪ್ಪ ಸಿದ್ದಪ್ಪ ಮಾಳಗಿ, ಗಡಹಿಂಗ್ಲಾಜ್
839 ವಿಶ್ವನಾಥ ಚನ್ನಪ್ಪ ಕಾಪಸೆ, ಗಡಹಿಂಗ್ಲಾಜ್
840 ಸತ್ಯಗೊಂಡ ಗಿರಿಗೊಂಡ ಪಾಟೀಲ (ಖಣದಾಳ), ಗಡಹಿಂಗ್ಲಾಜ್
841 ಶಿವಲಿಂಗಪ್ಪ ಈಶ್ವರಪ್ಪ ಹಂಜಿ, ಗಡಹಿಂಗ್ಲಾಜ್
842 ರಾಮಲಿಂಗಪ್ಪ ಈಶ್ವರಪ್ಪ ಹಂಜಿ, ಗಡಹಿಂಗ್ಲಾಜ್

843 ವೀರಪ್ಪ ಬಸಪ್ಪ ಬಸರಿ, ಗಡಹಿಂಗ್ಲಾಜ್
844 ಶಿವಲಿಂಗಪ್ಪ ಗುರುಲಿಂಗಪ್ಪ ತರಳಿ, ಗಡಹಿಂಗ್ಲಾಜ್
845 ರಾಜಶೇಖರ ಗಿರಿಮಲ್ಲಪ್ಪ ದಡ್ಡಿ, ಗಡಹಿಂಗ್ಲಾಜ್
846 ಅಪ್ಪಾಸಾಹೇಬ ನಾಗಪ್ಪ ಅಜರಿ, ಗಡಹಿಂಗ್ಲಾಜ್
847 ಮಹಾದೇವ ಸಾತಪ್ಪ ಗಡವಿ, ಗಡಹಿಂಗ್ಲಾಜ್
848 ಅಪ್ಪಾಸಾಹೇಬ ಮಲ್ಲಪ್ಪ ಜೊಂಡ, ಗಡಹಿಂಗ್ಲಾಜ್
849 ರಮೇಶ ಬಾಬೂರಾವ ಪಾಟೀಲ, ಗಡಹಿಂಗ್ಲಾಜ್
850 ಮಲ್ಲಪ್ಪ ರಾಚಪ್ಪ ಪಟ್ಟಣಶೆಟ್ಟಿ, ಗಡಹಿಂಗ್ಲಾಜ್
851 ಪಾರ್ವತಿ ನಾಗಪ್ಪ ಹಟ್ಟಿ, ಗಡಹಿಂಗ್ಲಾಜ್
852 ಬಾಬೂರಾವ ಭೈರಣ್ಣ ಪಾಟೀಲ, ಗಡಹಿಂಗ್ಲಾಜ್
853 ಬಸನಗೌಡ ನಿಂಗನಗೌಡ ಪಾಟೀಲ, ಗಡಹಿಂಗ್ಲಾಜ್
854 ಕಾಶೀನಾಥ ಬಾಳಪ್ಪ ಮಾನೆ, ಗಡಹಿಂಗ್ಲಾಜ್
855 ಪರವ್ವ ವೀರಭದ್ರಪ್ಪ ಪಟ್ಟಣಶೆಟ್ಟಿ, ಗಡಡಹಿಂಗ್ಲಾಜ್
856 ಮನೋಹರ ನಾಗಪ್ಪ ಬಾಗಿ, ಗಡಹಿಂಗ್ಲಾಜ್
857 ವಿ. ರಾಮರೆಡ್ಡಿ, ಬಳ್ಳಾರಿ
858 ಅಮರಪ್ಪ ಗುಂಡಪ್ಪ ಉಪನಾಳ, ನಾರಾಯಣಪುರ
859 ಶಿವಪ್ಪ ಬಸಪ್ಪ ಮೇಗಳಮನಿ, ನಾಲತ್ವಾಡ
860 ಶ್ರೀಪಾದ ಹೆಚ್. ಸಾವುಕಾರ, ನಾರಾಯಣಪುರ
861 ಕೃಷ್ಣಪ್ಪ ಭರಮಪ್ಪ ಮೊಸಳಿ, ಗಡಹಿಂಗ್ಲಾಜ್
862 ನೀಲಮ್ಮ ಮಹಾದೇವ ಸೊಲಬ, ಇಂಗಳೆ
863 ಮಹಾದೇವಿ ಶಿತಿಕಂಠಯ್ಯಸ್ವಾಮಿ, ಗುಲಬರ್ಗಾ

(ಮುಂದುವರಿಯುವುದು)

ಧರ್ಮಗ್ರಂಥ ನಿಧಿಗೆ 1001 ರೂ ಕೊಟ್ಟವರು.

ಶರಣರುಗಳಾದ :

396 ಶಿವಾಜಿರಾವ್ ಆರ್. ಪಾಟೀಲ, ಗಡಹಿಂಗ್ಲಾಜ್
397 ಅಶೋಕ ಭೋಜಪ್ಪ ಅಮಾಸಿ, ಗಡಹಿಂಗ್ಲಾಜ್
398 ಗಿರಿಜಮ್ಮ ಸುಬ್ಬಣ್ಣ ಮೈಸೂರು, ಧಾರವಾಡ
399 ಮಹಾದೇವಿ ಶಿತಿಕಂಠಯ್ಯಸ್ವಾಮಿ, ಗುಲಬರ್ಗಾ

ಸಾಹಿತ್ಯ ಪ್ರಕಟಣೆಗೆ ವಿಶ್ವಕಲ್ಯಾಣ ಮಿಷನ್‌ಗೆ

1. ಕೃಷ್ಣಪ್ಪ ಭರಮಪ್ಪ ಮೊಸಳಿ (ಮುಗಳೀಕರ್) ಗಡಹಿಂಗ್ಲಾಜ್ 6001-00
2. ಗಿರಿಜಮ್ಮ ಸುಬ್ಬಣ್ಣ ಮೈಸೂರು, ಧಾರವಾಡ 3001-00

ಧ್ವನಿಸುರುಳಿಗೆ 1500 ರೂ ಕೊಟ್ಟವರು

ಶರಣೆ. ವಿಜಯಾ ಮತ್ತು ನಂಜುಂಡಪ್ಪ, ದಾವಣಗೆರೆ

ಶರಣೆ. ನಿರ್ಮಲಾ ಮತ್ತು ಜಯದೇವ, ಮಲ್ನಾಡ್ ಕಾಫಿ ವರ್ಕ್ಸ್, ಬೆಂಗಳೂರು

ವೀಡಿಯೋ ಕೆಸೆಟ್ಟಿಗೆ

ಶರಣೆ. ರೇವಮ್ಮ ಈಶ್ವರಪ್ಪ, ಬೆಂಗಳೂರು 1001-00

ಈ ಎಲ್ಲ ಶರಣ ಬಂಧುಗಳಿಗೂ ಮಂತ್ರಪುರುಷ ಬಸವಣ್ಣನವರು ಆಯುರಾರೋಗ್ಯಭಾಗ್ಯ ಸಕಲ ಸಂಪದವನ್ನು ಕರುಣಿಸಲೆಂದು ಹಾರೈಸುತ್ತೇವೆ.

—**ಮಾತಾಜಿ**, ಕಾರ್ಯಾಧ್ಯಕ್ಷೆ

ವಿ. ಸೂ : ಸ್ಥಳಾಭಾವದಿಂದ ನಾರಾಯಣಪುರ ಮತ್ತಿತರ ಊರುಗಳ ದಾನಿಗಳ ಹೆಸರು ಪೂರ್ಣವಾಗಿ ಪ್ರಕಟಿಸಿಲ್ಲ, ಕ್ಷಮೆ ಇರಲಿ.

—ಕಸ್ತೂರಿ, ವ್ಯವಸ್ಥಾಪಕಿ

ಚಂದಾದಾರರಿಗೆ ಸೂಚನೆ

ಕಲ್ಯಾಣಕಿರಣ ಮಾಸಪತ್ರಿಕೆಗೆ ಚಂದಾದಾರರು ಹೆಚ್ಚಾಗಿರುವುದರಿಂದ ವಾರ್ಷಿಕ ಮತ್ತು ಕಂತಿನ ಆಜೀವ ಸದಸ್ಯರ ಚಂದಾ ಸಂಖ್ಯೆ ಬದಲಾಗಿದೆ. ಆದ್ದರಿಂದ ತಾವು ಬದಲಾದ ಚಂದಾ ಸಂಖ್ಯೆಯನ್ನು ಗುರುತು ಮಾಡಿಕೊಳ್ಳಬೇಕೆಂದು ಕೋರುತ್ತೇವೆ.

ಶೀಘ್ರ ಉತ್ತರಕ್ಕೆ ಕೆಳಗಿನ ವಿಳಾಸದೊಂದಿಗೆ ವ್ಯವಹರಿಸಿರಿ.

ಕಲ್ಯಾಣಕಿರಣ ಮಾಸ ಪತ್ರಿಕೆ
ಬಸವ ಗಂಗೋತ್ರಿ, ಮೈಸೂರು ರಸ್ತೆ
ಕುಂಬಳಗೋಡು—560074.
ಬೆಂಗಳೂರು ದಕ್ಷಿಣ—ತಾಲ್ಲೋಕು

—ವ್ಯವಸ್ಥಾಪಕರು

ಧರ್ಮಪ್ರಚಾರಕ ನಿಧಿಗೆ 1001 ರೂ ಕೊಟ್ಟವರು

ಶರಣರುಗಳಾದ :

1. ಶೋಭಾದೇವಿ ಕಲ್ಯಾಣಪ್ಪ ಪರಮಾದಿ, ಹುಬ್ಬಳ್ಳಿ
2. ಶಕುಂತಲಾ ಪುಟ್ಟಸಿದ್ಧಪ್ಪ, ಬೆಂಗಳೂರು
3. ರಾವ್‌ಸಾಹೇಬ. ಶಂಕರಪ್ಪ ಶ್ರೇಷ್ಠಿ, ಗಡಹಿಂಗ್ಲಾಜ
4. ಶ್ರೀಕಾಂತ ಸದಾಶಿವ ಮಹಾಜನ, ಗಡಹಿಂಗ್ಲಾಜ
5. ಎಸ್. ಎಸ್. ಜಮದಾಳೆ, ಗಡಹಿಂಗ್ಲಾಜ
6. ವೀರಪ್ಪ ಬಸಪ್ಪ ಬುಸಾರಿ, ಗಡಹಿಂಗ್ಲಾಜ

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರ ಅಭಿನಂದನ ಸಮಾರಂಭಕ್ಕೆ ಕೊಟ್ಟವರು

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಶರಣರುಗಳಾದ :	1001-00
ಬಸವರಾಜು, ಬೆಂಗಳೂರು	501-00
ಡಾ॥ ಕುರಬೇಟ, ಸಂಕೇಶ್ವರ	501-00
ಆರ್. ಎಸ್. ಮೀನಾಕ್ಷಮ್ಮ, ಬೆಂಗಳೂರು	101-00
ಮಲ್ಲಪ್ಪ ಈರಪ್ಪ ಬೆಟಗೇರಿ. ಬೈಲಹೊಂಗಲ	250-00
ಪೊನ್ನಮ್ಮ ಚೆಂಗಪ್ಪ, ಬೆಂಗಳೂರು	101-00
ಬೀರಂಬಾಡಿ ಗಂಗಮ್ಮ, ತಾಂಡೂರು	250-00
ಎಸ್. ಕೆ. ಕುರುಬೇಟ, ಸಂಕೇಶ್ವರ	101-00
ಶಿವಪುತ್ರಪ್ಪ ಶಂಕರಪ್ಪ ಹತ್ತಿ, ಗಡಹಿಂಗ್ಲಾಜ್	101-00
ಶಿವರಾಂ ಥೋಂಡಿಬಾ ಪವಾರ, ಗಡಹಿಂಗ್ಲಾಜ್	101-00
ಬಾಬೂರಾವ್ ಶಂಕರ್ ಕಾಪ್ಸೆ, ಗಡಹಿಂಗ್ಲಾಜ್	101-00
ವೀರಗೊಂಡ ರಾಮಗೊಂಡಾ ಪಾಟೀಲ, ಗಡಹಿಂಗ್ಲಾಜ್	201-00
ವೀರಭದ್ರಪ್ಪ ಕಲ್ಲಪ್ಪ ತೋರಗಲ್ಲಿ, ಗಡಹಿಂಗ್ಲಾಜ್	101-00
ಶಾಂತಕ್ಕ ಲೋಣಿ, ಗಡಹಿಂಗ್ಲಾಜ್	101-00
ಭರಮಗೌಡ ಕಲ್ಲಗೌಡ ಪಾಟೀಲ, ಗಡಹಿಂಗ್ಲಾಜ್	101-00
ಅಶೋಕ್ ಕಮಲಾಕರ ಜವಳಕರ, ಗಡಹಿಂಗ್ಲಾಜ್	501-00
ವಿಶ್ವನಾಥ ಚನ್ನಪ್ಪ ಕಾಪ್ಸೆ, ಗಡಹಿಂಗ್ಲಾಜ್	201-00
ರವೀಂದ್ರ ಶಂಕರಪ್ಪ ಮುಸಳೆ, ಗಡಹಿಂಗ್ಲಾಜ್	

ಡಾ॥ ಎಸ್. ಎಂ. ಪಾಟೀಲ, ಗಡಹಿಂಗ್ಲಾಜ್	501-00
ಶಿವಲೀಲಾ ವಿಶ್ವನಾಥ ಮೂರ್ತಿ, ಗಡಹಿಂಗ್ಲಾಜ್	1300-00
ಗುಂಡಪ್ಪ ಮಲ್ಲಪ್ಪ ಚೆಟ್ಟಿ, ಗಡಹಿಂಗ್ಲಾಜ್	501-00
ರಾವ್‌ಸಾಹೇಬ ರಾಮಗೌಡ ಪಾಟೀಲ,	101-00
ಮಲ್ಲಪ್ಪ ಬಾಳಪ್ಪ ದೇಸಾಯಿ. ಗಡಹಿಂಗ್ಲಾಜ್	201-00
ಶಿವಲಿಂಗಪ್ಪ ಅಜರಾ, ಗಡಹಿಂಗ್ಲಾಜ್	101.00
ಅಪ್ಪಾಸಾಹೇಬ ಬಸಗೊಂಡ ಪಾಟೀಲ, ಗಡಹಿಂಗ್ಲಾಜ್	201-00
ವಿಶ್ವನಾಥ ಸತ್ಯಪ್ಪ ಗುರವ್ವ, ಗಡಹಿಂಗ್ಲಾಜ್	301-00
ವಿಶ್ವನಾಥ ಚನ್ನಪ್ಪ ಕೋಡಳ್ಳಿ, ಗಡಹಿಂಗ್ಲಾಜ್	251-00
ಮಾರುತಿ ದುಂಡಪ್ಪ ಗುರವ್ವ, ಗಡಹಿಂಗ್ಲಾಜ್	201-00
ವಿಲಾಸ ಅಣ್ಣಾಸಾಹೇಬ ಕಿತ್ತೂರಕರ್, ಗಡಹಿಂಗ್ಲಾಜ್	251-00
ರಾಮಪ್ಪ ಸಿದ್ಧಪ್ಪ ಕರಿಗಾರ, ಗಡಹಿಂಗ್ಲಾಜ್	201-00
ಮಲ್ಲಗೊಂಡ ರಾಮಗೊಂಡ ಪಾಟೀಲ, ಗಡಹಿಂಗ್ಲಾಜ್	101-00
ಸಿದ್ಧಪ್ಪ ಕಲ್ಲಪ್ಪ ಚೌಗಲೆ, ಗಡಹಿಂಗ್ಲಾಜ್	101.00
ಶಿವಪುತ್ರ ಮಲ್ಲಪ್ಪ ಶಿಂತ್ರೆ, ಗಡಹಿಂಗ್ಲಾಜ್	101-00
ಎಂ. ಎಸ್. ಚೌಗಲೆ, ಗಡಹಿಂಗ್ಲಾಜ್	101-00
ಈಶ್ವರ ಭೀಮಣ್ಣ ಹುಕ್ಕೇರಿ, ಗಡಹಿಂಗ್ಲಾಜ್	101-00
ಭೀಮರಾಜ್ ಬಾಬೂರಾವ ರಾಜಮಾನೆ, ಗಡಹಿಂಗ್ಲಾಜ್	101-00
ವಿಶ್ವನಾಥ ಶಿವಯೋಗಿ ಕಥಕ್ಕಳಿ, ಗಡಹಿಂಗ್ಲಾಜ್	501.00
ಶಿವಯ್ಯ ಮಹಾಲಿಂಗಯ್ಯ ಮಠ, ಗಡಹಿಂಗ್ಲಾಜ್	151-00

(ಮುಂದುವರಿಯುವುದು)

ಈ ಎಲ್ಲ ಶರಣ ಬಂಧುಗಳಿಗೂ ಶುಭಹಾರೈಕೆಗಳು.

—ಮಾತಾಜಿ

ಬೀಜದಿಂದ ಹುಟ್ಟಿದ ವೃಕ್ಷವು ಬೀಜವ ಹೋಲುವಂತೆ
ತಾಯಿಯಿಂದ ಹುಟ್ಟಿದ ಮಕ್ಕಳು ತಾಯಿಯನ್ನು ಹೋಲುವಂತೆ
ಧಾನ್ಯಂಗಳಿಂದ ಬೆಳೆದ ಬೆಳಸು ಧಾನ್ಯಂಗಳೆ ಹೋಲುವಂತೆ
ಗುರುವಿನಿಂದ ಹುಟ್ಟಿದ ಶಿಷ್ಯನು ಗುರುರೂಪವಲ್ಲದೆ
ಬೇರೊಂದು ರೂಪವಲ್ಲವಯ್ಯ ಅಖಂಡೇಶ್ವರ. —ಶ್ರೀ ಷಣ್ಮುಖ ಸ್ವಾಮಿಗಳು

ಗಡಹಿಂಗ್ಲಾಜದಲ್ಲಿ ವಿಶ್ವಧರ್ಮ ಪ್ರವಚನ

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರು ತಿಪಟೂರು ನಗರದಲ್ಲಿ ಪ್ರವಚನವನ್ನು ಮಂಗಲಮಾಡಿದ ಮೇಲೆ, ಧ್ವನಿ ಸುರುಳಿಗಳ ಧ್ವನಿಮುದ್ರಣ ಕಾರ್ಯದಲ್ಲಿ ಭಾಗಿಗಳಾಗಿ ಸೋಮವಾರ ದಿ. 5-8-1991 ರಂದು, ಮಹಾರಾಷ್ಟ್ರ ರಾಜ್ಯದ ಕೊಲ್ಲಾಪುರ ಜಿಲ್ಲೆಯ ಗಡಹಿಂಗ್ಲಾಜದಲ್ಲಿ ಪ್ರವಚನ ಆರಂಭಿಸಿದರು. ಸುಮಾರು 30 ವರ್ಷಗಳ ಹಿಂದೆ ಅಲ್ಲಿ ಮಾಡಿದ್ದುಂಟು. ಗಡಿನಾಡಿನ ಗಡಹಿಂಗ್ಲಾಜ್‌ದಲ್ಲಿ ಕನ್ನಡವು ಲಿಂಗವಂತರ ಮನೆ ಮಾತಾಗಿ ಮಾತನಾಡಲು ಬರುವುದಾದರೂ, ಓದಲು-ಬರೆಯಲು ಅಲ್ಲಿಯವರಿಗೆ ಬರದು. ಕರ್ನಾಟಕದ ಸಂಕೇಶ್ವರವು ಕೇವಲ 14 ಕಿಲೋಮೀಟರ್ ಇರುವುದರಿಂದಲೂ ಮತ್ತು ವಿವಾಹ ಸಂಬಂಧವು ಕರ್ನಾಟಕದ ಪ್ರದೇಶಗಳವರ ಜೊತೆ ಇರುವುದರಿಂದಲೂ ಇನ್ನೂ ಭಾಷೆ ಉಳಿದಿದೆ.

ಭಾಷೆ ಬರದಿದ್ದರೂ ಭಾವ ಸಂಪದದಲ್ಲಿ ಜನರು ಅತ್ಯುತ್ತಮರಾಗಿದ್ದಾರೆ. ಭಕ್ತಿಭಾವ ಇರುವುದರ ಜೊತೆಗೆ ಜ್ಞಾನ ಸಂಪಾದನೆಯಲ್ಲಿ ಅತೀವ ಆಸಕ್ತಿ ಹೊಂದಿದ್ದಾರೆ. ಧೋ ಧೋ ಎಂದು ಮಳೆ ಮೇಲೆ ಸುರಿಯುತ್ತಿದ್ದರೆ ಸಹ, ಕಿಕ್ಕಿರಿದು ಸೇರಿ, ಛತ್ರಿ ಹಿಡಿದುಕೊಂಡು ಎರಡು ತಾಸು ನಿಂತುಕೇಳುವ ಉತ್ಸಾಹ ಅವರದು. ಏನೋ ಅಪರೂಪಕ್ಕೆ ಸಿಕ್ಕಿರುವ ಭಾಗ್ಯ, ಒಂದು ಕ್ಷಣವೂ ಅದನ್ನು ಕಳೆದುಕೊಳ್ಳಬಾರದು ಎಂಬ ಕಾತುರ ಅವರಲ್ಲಿ. ಇದರಿಂದಾಗಿ ಅಪ್ಪಾಜಿಯವರಿಗೂ ಅತೀವ ಉತ್ಸಾಹ. ಪೂಜ್ಯ ಅಪ್ಪಾಜಿಯವರ ಹುಟ್ಟುಹಬ್ಬವನ್ನೂ ಭಕ್ತಿಯಿಂದ ಆಚರಿಸಿದರು. ತನು-ಮನ-ಧನದಿಂದ ಸಹಾಯ ಸಲ್ಲಿಸಿದರು. ನಾರಾಯಣಪುರದ ಪ್ರವಚನ ಪೂರೈಸಿ ಪೂಜ್ಯ ಮಾತೆ ಗಂಗಾದೇವಿಯವರೂ ಪೂಜ್ಯ ಗುರುಗಳ 61ನೆಯ ವರ್ಧಂತಿಯಲ್ಲಿ ಭಾಗವಹಿಸಿದರು. ನಗರದ ಗಣ್ಯ ವ್ಯಾಪಾರಿಗಳಾದ ಶರಣ. ರಾವ್ ಸಾಹೇಬ ಬಾಪೂ ಸಾಹೇಬ ಕಿತ್ತೂರ್ ಕರ್ ಮತ್ತು ಶರಣ. ವಿಲಾಸ್ ಬಾಗಿ ಅವರು ವರ್ಧಂತಿ ಉತ್ಸವದಂದು ಭಾಗವಹಿಸಿ ಪೂಜ್ಯರಿಗೆ ಪುಷ್ಪವೃಷ್ಟಿಗೈದು ಶುಭಕೋರಿದರು.

ಮುಕ್ತಾಯದ ಸನ್ನಿವೇಶದಲ್ಲಿ ಜನತೆಯ ಆಗ್ರಹದ ಮೇರೆಗೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರೂ ಸೆಪ್ಟೆಂಬರ್ 15, 16, 17 ರಂದು ಭಾಗವಹಿಸಿದರು. ದಿ. 17-9-91 ರಂದು ಕಾರ್ಯಕ್ರಮವು ಮಂಗಳಗೊಂಡಿತು.

ನಾರಾಯಣಪುರದಲ್ಲಿ ಪ್ರವಚನ

ಗುಲಬರ್ಗಾಜಿಲ್ಲೆಯ ಸುರಪುರ ತಾಲ್ಲೋಕಿನಲ್ಲಿರುವ ನಾರಾಯಣಪುರದಲ್ಲಿ ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರು 15-7-1991 ರಂದು ಪ್ರವಚನವನ್ನಾ

ರಂಭಿಸಿ, 8-9-91 ರಂದು ಮಂಗಲಮಾಡಿದರು. ಪೂಜ್ಯ ಗುರುಗಳವರ ಹುಟ್ಟು ಹಬ್ಬದಲ್ಲಿ ದಿ. 11-9-91 ರಂದು ಭಾಗವಹಿಸಿದರು. ದಿ. 17-9-91 ರಿಂದ ತಮಿಳು ನಾಡಿನ ನೀಲಗಿರಿ ಜಿಲ್ಲೆಯಲ್ಲಿ ಪ್ರವಾಸಕ್ಕೈಗೊಂಡು ಸಂಚರಿಸುತ್ತಿರುವ ಪೂಜ್ಯ ಮಾತೆ ಗಂಗಾದೇವಿಯವರು ಶಿಬಿರದಲ್ಲಿ ಭಾಗವಹಿಸುವರು.

ರಾಜಾಪುರದಲ್ಲಿ ಪ್ರವಚನ

ಪೂಜ್ಯ ಶ್ರೀ ಮಾತೆ ನೀಲಾಂಬಿಕೆಯವರು ಗುಲಬರ್ಗಾ ಜಿಲ್ಲೆಯ ರಾಜಾಪುರದ ಶ್ರೀ ಮಲ್ಲಿಕಾರ್ಜುನ ದೇವಾಲಯದಲ್ಲಿ 10-8-1991 ರಂದು ಪ್ರವಚನ ಆರಂಭಿಸಿ 15-9-91 ರಂದು ಮಂಗಲಗೊಳಿಸಿದರು.

—ವರದಿ : **ಶರಣೆ. ಮಲ್ಲಮ್ಮ**



ಬೆಂಗಳೂರಿನ ರಾಜಾಜಿನಗರದ ಎರಡನೆಯ ಬ್ಲಾಕಿನಲ್ಲಿರುವ ಶ್ರೀ ಬಸವೇಶ್ವರ ವಿದ್ಯಾಲಯದ ಆವರಣದಲ್ಲಿ

ವಿಶ್ವಧರ್ಮ ಪ್ರವಚನ

ಅಪೂರ್ವ ವಾಗ್ಮಿಗಳು, ಪ್ರವಚನ ಪಿತಾಮಹರು ಬಸವ ಧರ್ಮ ಪೀಠದ ಗೌರವಾಧ್ಯಕ್ಷರು ಆದ

ಪೂಜ್ಯ ಶ್ರೀ ಶ್ರೀ ಸದ್ಗುರು ಲಿಂಗಾನಂದಸ್ವಾಮಿಗಳು

ಅವರು ಸೋಮವಾರ ದಿನಾಂಕ 23-9-1991 ರಿಂದ ನಾಲ್ಕು ವಾರಗಳವರೆಗೆ ಪ್ರತಿದಿನ ಸಾಯಂಕಾಲ 6-30 ರಿಂದ 9-00ರ ವರೆಗೆ ಆಧ್ಯಾತ್ಮಿಕ ಪ್ರವಚನ ಮಾಡಲಿದ್ದಾರೆ.

–ಸರ್ವರಿಗೂ ಆದರದ ಸುಸ್ವಾಗತ–

ವಿಶ್ವಧರ್ಮ ಪ್ರವಚನ ಸಮಿತಿ **ಬೆಂಗಳೂರು**

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

ಧರ್ಮಕ್ರಾಂತಿಯ ಧೀರಯೋಗಿ, ಪ್ರವಚನ ಪಿತಾಮಹ

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರ

ಅಭಿನಂದನ ಕಾರ್ಯಕ್ರಮ.

ಚಲಿಸುವ ಜ್ಞಾನ ದೇಗುಲವಾಗಿ ಅಸಂಖ್ಯಾತ ಚೇತನಗಳಿಗೆ ಅರಿವಿನ ಬೆಳಕನ್ನು
ಕೊಟ್ಟು, ಹರಿವ ಜ್ಞಾನಗಂಗೆಯಾಗಿ ಅಪರಿಮಿತ ಕ್ಷೇತ್ರದಲ್ಲಿ ಸಂಚರಿಸಿ ಪಾರಮಾರ್ಥಿಕ
ನಂದನವನ್ನು ನಿರ್ಮಿಸಿದ ದಿವ್ಯ ಚೇತನ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿ
ಗಳು. ತಮ್ಮದೇ ಆದ ವಾಗ್ಮಿತ್ವದಿಂದ ಎಲ್ಲರನ್ನು ಎಚ್ಚರಿಸುತ್ತ ಧೀಮಂತ ವ್ಯಕ್ತಿತ್ವ
ದಿಂದ ಆಕರ್ಷಿಸುತ್ತ ಅವರಲ್ಲಿ ಧರ್ಮವನ್ನು ಕುರಿತು ಶ್ರದ್ಧೆ, ಆಸಕ್ತಿ, ಅಭೀಪ್ಸೆ ಹುಟ್ಟಿ
ಸುವ ಪ್ರತಿಭಾವಂತ ಪ್ರವಚನಕಾರರು ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು.
ವಿಶ್ವಗುರು ಬಸವಣ್ಣನವರು ಜನಿಸಿದ ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲ್ಲೋಕಿನ
ಮನಗೂಳಿಯಲ್ಲಿ ಗಣೇಶ ಚೌತಿಯ 15-9-1931 ರಂದು ಜನಿಸಿ, ಬಿ. ಎ. ಆನರ್ಸ್
ಪದವೀಧರರಾಗಿ, 25-4-1955 ರಂದು ಅಧ್ಯಾತ್ಮಿಕ ಮಾನಸಾಂತರ ಹೊಂದಿ,
19-11-1956 ರಂದು ಜ್ಞಾನ ಸನ್ಯಾಸವನ್ನು ಸ್ವೀಕರಿಸಿ ಅಂದಿನಿಂದ ಇಂದಿನವರೆಗೂ
ಒಂದು ದಿನವೂ ಬಿಡದೆ ಜ್ಞಾನದಾಸೋಹ ಮಾಡುತ್ತಿರುವ ಪಾವನ ಚೇತನ ಪೂಜ್ಯ
ಸ್ವಾಮೀಜಿಯವರು. "ಸೂರ್ಯನುದಯ ತಾವರೆಗೆ ಜೀವಾಳ, ಚಂದ್ರನುದಯ ನೈದಿ
ಲೆಗೆ ಜೀವಾಳವಾದಂತೆ" ಪೂಜ್ಯ ಸ್ವಾಮೀಜಿಯವರ ಬರವು ಮತ್ತು ಬದುಕು ಬಸವ
ತತ್ತ್ವಕ್ಕೆ ಜೀವಾಳವಾಗಿದೆ. ಬಸವ ಯುಗಕ್ಕೆ ನಾಂದಿ ಹಾಡಿದ ಚೇತನಶಕ್ತಿ ಪೂಜ್ಯರು
ಎಂದರೆ ಉತ್ಪ್ರೇಕ್ಷೆಯಾಗದು.

ತರಗತಿಯಲ್ಲಿ ಪಾಠವನ್ನು ಮಾಡುವ ಶಿಕ್ಷಕರನ್ನು ಬಿಟ್ಟರೆ, ಬಹುಶಃ ಒಂದು
ದಿನವೂ ಎಡಬಿಡದೆ ಜ್ಞಾನದಾಸೋಹವನ್ನು ಮಾಡಿರುವುದರಲ್ಲಿ ಪೂಜ್ಯ ಸ್ವಾಮೀಜಿಯ
ವರ ಹೆಸರನ್ನು ಗಿನ್ನೀಸ್ ದಾಖಲೆಗೂ ಸೇರಬಹುದೇನೋ! ಅದೂ ಜ್ಞಾನದಾಸೋಹ
ವೆಂದರೆ ಹತ್ತಾರು ಜನರ ಮುಂದೆ ಮಾಡುವ ಉಪನ್ಯಾಸವಲ್ಲ. ಸಹಸ್ರ ಸಹಸ್ರಜನತೆಯ
ಮುಂದೆ ನಡೆಯುವ ಅಪೂರ್ವ ಪ್ರವಚನ. ಆ ಪ್ರವಚನವೂ ಏನೇನೂ ಪರಿಣಾಮ,
ಪರಿವರ್ತನೆ ಮಾಡದ ಒಂದು ಯಾಂತ್ರಿಕ ಬೋಧೆಯಲ್ಲ; ಹೃನ್ಮನಗಳನ್ನು ಅರಳಿಸುವ,
ಬುದ್ಧಿಯನ್ನು ವಿಕಸಿಸುವ ಅಪೂರ್ವ ಉಪದೇಶ.

ಪರಮ ಪೂಜ್ಯ ಸ್ವಾಮೀಜಿಯವರು ಸುಯಿಧಾನ ಸುಗ್ರಂಥ ಮಾಲೆ ಎಂಬ ಪ್ರಕಾ
ಶನ ಸಂಸ್ಥೆಯನ್ನು ಆರಂಭಿಸಿ, ಈ ವರೆಗೂ 80ಕ್ಕೂ ಮಿಕ್ಕಿ ಅತ್ಯುತ್ತಮ ಗ್ರಂಥಗಳನ್ನು
ಹಲವಾರು ಬಾರಿ ಪುನರ್ಮುದ್ರಣಗೊಳ್ಳುವಂತೆ, ಪ್ರಕಟಿಸಿದ್ದಾರೆ. ಪ್ರಕಟಿಸುವುದು

ಮುಖ್ಯವಲ್ಲ ಕರ್ನಾಟಕ ರಾಜ್ಯಾದಂತ ಮತ್ತು ಗಡಿ ನಾಡುಗಳಲ್ಲಿ ಆ ಗ್ರಂಥಗಳು ಜನತೆಗೆ ಮುಟ್ಟುವಂತಹ ಪ್ರಸಾರ ಯೋಜನೆ ಹಾಕಿದ್ದಾರೆ. ಹೀಗಾಗಿ ಈ ಸಂಸ್ಥೆಯ ಜ್ಞಾನಪ್ರಕಾಶ ವ್ಯಾಪಕವಾಗಿ ಹಬ್ಬಿ ಹಸರಿಸಿದೆ.

ಸಂಸ್ಥೆಯ ನಿರ್ಮಾಪಕರು

ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ :

ಕಿತ್ತೂರು (ಉತ್ತರ) ಕರ್ನಾಟಕದ ಶೈಕ್ಷಣಿಕ-ಸಾಂಸ್ಕೃತಿಕ ರಾಜಧಾನಿ ಧಾರವಾಡದಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ ಎಂಬ ಮಹಿಳಾ ಜಗದ್ಗುರು ಪೀಠವನ್ನು ಸಂಸ್ಥಾಪಿಸಿ, ತಮ್ಮ ಕರಕಮಲ ಸಂಜಾತರಾದ ಪೂಜ್ಯ ಶ್ರೀ ಮಾತೆ ಮಹಾದೇವಿಯವರನ್ನು ಪ್ರಥಮ ಜಗದ್ಗುರುವನ್ನಾಗಿ ಪೀಠಕ್ಕೆ ಏರಿಸಿ ವಿಶ್ವಗುರು ಬಸವಣ್ಣನವರು ಕೊಟ್ಟ ಸ್ತ್ರೀ ಸಮಾನತೆಯನ್ನು ಆಚರಣೆಗೆ ತಂದ ಧೀಮಂತರು ಪೂಜ್ಯ ಸ್ವಾಮೀಜಿಯವರು.

ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ ಮತ್ತು ಬಸವ ಗಂಗೋತ್ರಿ :

ಕರ್ನಾಟಕದ ರಾಜಧಾನಿ, ಕಲ್ಯಾಣ ನಗರ ಎಂದು ಖ್ಯಾತಿವೆತ್ತ ಬೆಂಗಳೂರಿನಲ್ಲಿ ವಿಶ್ವಕಲ್ಯಾಣ ಮಿಷನ್ ಎಂಬ ವಿಶ್ವಸ್ಥ ಸಂಸ್ಥೆ ಸ್ಥಾಪಿಸಿ, ಅದರ ವತಿಯಿಂದ ಬಸವ ಮಂಟಪ ಎಂಬ ಪ್ರಾರ್ಥನಾ ಮಂದಿರವನ್ನು, ಬಸವ ಗಂಗೋತ್ರಿ ಎಂಬ ಮಠವನ್ನು ನಿರ್ಮಿಸಿದ್ದಾರೆ. ಬಸವ ಗಂಗೋತ್ರಿಯು ಶ್ರೀ ಬಸವೇಶ್ವರ ಕಲ್ಯಾಣ ಮಂದಿರ ಮತ್ತು ಶ್ರೀ ರುದ್ರಾನಂದ ಕಲ್ಯಾಣ ಮಂದಿರ ಎಂಬ ಎರಡು ಕಲ್ಯಾಣ ಮಂದಿರ ಹೊಂದಿ ಜನರಿಗೆ ಮದುವೆಯ ಮಂಗಲ ಕಾರ್ಯಮಾಡಲು ಅನುಕೂಲ ಒದಗಿಸುತ್ತಿದೆ. ಸರ್ವಜ್ಞ ಮುದ್ರಣಾಲಯ ಮತ್ತು ಕಲ್ಯಾಣ ಕಿರಣ ಮಾಸಪತ್ರಿಕೆ ಕಾರ್ಯಾಲಯಗಳು ಬಸವ ಗಂಗೋತ್ರಿಯ ಆವರಣದಲ್ಲಿವೆ.

ಬಸವ ಧರ್ಮ ಪೀಠ :

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವು ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೋಕಿನಲ್ಲಿದ್ದು, ಬಹಳ ಮಹತ್ವದ ಕ್ಷೇತ್ರವಾಗಿದ್ದರೂ ಅತ್ಯಂತ ನಿರ್ಲಕ್ಷಿತ ಕ್ಷೇತ್ರವಾಗಿದ್ದಿತು. ಇದನ್ನು ಗಮನಿಸಿದ ಸ್ವಾಮೀಜಿ 1987 ರಲ್ಲಿ ಬಸವ ಧರ್ಮ ಪೀಠ ಎಂಬ ವಿಶ್ವಸ್ಥ ಸಂಸ್ಥೆಯೊಂದನ್ನು ಸ್ಥಾಪಿಸಿ, ಜಮೀನನ್ನು ಖರೀದಿಸಿ ಭವ್ಯವಾದ ಯೋಜನೆಯನ್ನು ಹಾಕಿಕೊಂಡು, ಸರ್ವಾಂಗೀಣವಾಗಿ ಕ್ಷೇತ್ರವನ್ನು ಬೆಳೆಸುತ್ತಿದ್ದಾರೆ. ಬಂದ ಪ್ರವಾಸಿಕರು ಉಳಿದುಕೊಳ್ಳಲು ಅಕ್ಕ ನಾಗಲಾಂಬಿಕಾ ಅತಿಥಿಗೃಹ ನಿರ್ಮಿಸುತ್ತಿದ್ದಾರೆ ; ನಿತ್ಯ ದಾಸೋಹ ಯೋಜನೆಯ ಮೂಲಕ ಪ್ರಸಾದದ ವ್ಯವಸ್ಥೆ ಮಾಡುತ್ತಿದ್ದಾರೆ. ಬಸವ ತತ್ತ್ವಾನು

ಯಾಯಿಗಳು ವರ್ಷಕ್ಕೊಮ್ಮೆ ಒಂದು ಜಾಗದಲ್ಲಿ ಸೇರಬೇಕು ಎಂದು ಸಂಘಟಿಸಿರುವ "ಶರಣ ಮೇಳ", ಬಸವ ತತ್ತ್ವಾನುಯಾಯಿಗಳಿಗೆ ಒಂದು ಕೇಂದ್ರ ಸ್ಥಾನ ಬೇಕು ಎಂದು "ಕೂಡಲ ಸಂಗಮ"ವನ್ನು ಧರ್ಮಕ್ಷೇತ್ರವನ್ನಾಗಿ ರೂಪಿಸಿದ ರೂವಾರಿ ಪೂಜ್ಯ ಸ್ವಾಮೀಜಿ.

ಇವಿಷ್ಟೂ ಪೂಜ್ಯ ಶ್ರೀಗಳ "ಸ್ಥಾವರ" ಕೊಡುಗೆಯಾದರೆ, ನಾಡಿನ ಉದ್ದಗಲಕ್ಕೂ ಸಂಚರಿಸಿ ಮಾಡಿರುವ, ಮಾಡುತ್ತಿರುವ ಧರ್ಮ ಪ್ರಚಾರ, ಪ್ರಚಾರಕರನ್ನು ತರಬೇತಿಗೊಳಿಸಬೇಕೆಂಬ ಪ್ರಯತ್ನ ಪೂಜ್ಯರ "ಜಂಗಮ" ಕೊಡುಗೆ. ಕೀರ್ತಿ ವಾರ್ತೆಯನ್ನು ಬಯಸದೆ, ವೈಭವ-ಆಡಂಬರಗಳಿಂದ ದೂರವಿದ್ದು, ಸದ್ದಿಲ್ಲದೆ ಸಂಚರಿಸಿ ಗೌಜು ಗದ್ದಲವಿಲ್ಲದೆ ಪ್ರವಚನ ಮಾಡಿ, ಜನಮಾನಸದಲ್ಲಿ ಅಪೂರ್ವ ಪರಿವರ್ತನೆ ತರುವ, ಚಲಿಸುವ ಜ್ಞಾನ ದೇವಾಲಯ ಪೂಜ್ಯ ಸ್ವಾಮೀಜಿಯವರು.

ಪೂಜ್ಯ ಸ್ವಾಮೀಜಿ, ಭಾವುಕ ಭಕ್ತರು, ವೈಚಾರಿಕ ತತ್ತ್ವಜ್ಞಾನಿಗಳು, ಪ್ರೌಢ ಚಿಂತನಶೀಲರು ಎಲ್ಲರನ್ನೂ ಆಕರ್ಷಿಸುವ ಧೀಮಂತ ಪ್ರತಿಭೆಯುಳ್ಳವರು. ಅವರು ಸಂಚರಿಸುವುದು ಬಲು ವ್ಯಾಪಕವಾಗಿ, ಹೊಂದಿರುವುದು ಬಹುದೊಡ್ಡ ಬಳಗವನ್ನು. ಪೂಜ್ಯರ ಪ್ರವಚನಗಳಿಂದ ಪ್ರೇರಿತರಾದವರು, ದೀಕ್ಷಾನುಗ್ರಹವನ್ನು ತೆಗೆದು ಕೊಂಡು ಭಕ್ತರಾದವರು, ಆಶ್ರಯ ಅನುಗ್ರಹ ಪಡೆದು ಶಿಷ್ಯರಾದವರು— ಈ ಎಲ್ಲರೂ ಕೂಡಿ ಇದೀಗ ಪೂಜ್ಯ ಸ್ವಾಮೀಜಿಯವರಿಗೆ ತಮ್ಮ ಗೌರವವನ್ನು, ಸೂಕ್ತವಾಗಿ ಹೇಳಬೇಕೆಂದರೆ ಕೃತಜ್ಞತೆಯನ್ನು ಅರ್ಪಿಸಲು ಸಿದ್ಧರಾಗಿದ್ದಾರೆ.

ಸಂದರ್ಭವೆಂದರೆ, ಪೂಜ್ಯ ಗುರೂಜಿಯವರು ಅರವತ್ತು ವರ್ಷಗಳನ್ನು ಪೂರೈಸುತ್ತಿರುವುದು. 1991 ರ ಗಣೇಶ ಚೌತಿಗೆ ಪೂಜ್ಯ ಸ್ವಾಮೀಜಿಯವರು ಅರವತ್ತು ವರ್ಷಗಳನ್ನು ಪೂರೈಸಿ, ಅರವತ್ತೊಂದಕ್ಕೆ ಪಾದಾರ್ಪಣ ಮಾಡಿದ್ದಾರೆ. ಈ ಸಂದರ್ಭದಲ್ಲಿ ಪೂಜ್ಯರಿಗೆ ಯಾವ ರೀತಿಯ ಕೃತಜ್ಞತೆಯನ್ನು ಸಮರ್ಪಿಸಬೇಕು ಎಂದು ಅವರ ಶಿಷ್ಯ ಬಳಗ ಕಾರ್ಯಕ್ರಮವನ್ನು ರೂಪಿಸುತ್ತಲಿದೆ.

1. ಕರ್ನಾಟಕದ ರಾಜ ಧಾನಿ ಬೆಂಗಳೂರಿನಲ್ಲಿ ಭಾನುವಾರ 27-10-1991 ರಂದು ರಾಜ್ಯಮಟ್ಟದ ಅಭಿನಂದನಾ ಸಮಾರಂಭವನ್ನು ರವೀಂದ್ರ ಕಲಾಕ್ಷೇತ್ರದಲ್ಲಿ ಏರ್ಪಡಿಸಿ, ಪೂಜ್ಯರಿಗೆ ಗುರುಕಾಣಿಕೆಯಾಗಿ ನಿಧಿಯೊಂದನ್ನು ಸಮರ್ಪಿಸುವುದೇ ಅಲ್ಲದೆ ಪೂಜ್ಯರ ಹೆಸರಿನಲ್ಲಿ ಧರ್ಮ ಪ್ರಚಾರಕ ನಿಧಿಯೊಂದನ್ನು ಸ್ಥಾಪಿಸುವುದು.

2. ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಧರ್ಮ ಪೀಠದ ಆಶ್ರಯದಲ್ಲಿ 12-1-1992 ರಂದು(ಶರಣ ಮೇಳಕ್ಕೆ ಒಂದು ದಿನ ಮೊದಲು)ಅಂತರ ರಾಜ್ಯ ಮಟ್ಟದ ಅಭಿನಂದನ ಸಮಾರಂಭ ಏರ್ಪಡಿಸುವುದು.

3. ಪೂಜ್ಯರ ಬದುಕು, ಬರಹ, ಹೋರಾಟ, ಸಾಧನೆ, ಸಿದ್ಧಿ, ಕುರಿತು ವಿವಿಧ ಲೇಖನಗಳುಳ್ಳ ಒಂದು ಸ್ಮರಣಸಂಪುಟವನ್ನು ಸಿದ್ಧಪಡಿಸುವುದು.

4. ಪೂಜ್ಯ ಸ್ವಾಮೀಜಿಯವರ ಪ್ರವಚನಗಳ ಕೆಲವು ವೀಡಿಯೋ ಕೆಸೆಟ್ಟು ಸಿದ್ಧಪಡಿಸುವುದು.

5. ಪ್ರವಚನಗಳ ಆಡಿಯೋ ಕೆಸೆಟ್ಟು ಸಿದ್ಧಪಡಿಸುವುದು.

ತ್ರೈವಾರ್ಷಿಕ ಯೋಜನೆ

ಪೂಜ್ಯರಾದ ಸದ್ಗುರುಗಳ 61 ನೆಯ ಹುಟ್ಟು ಹಬ್ಬದಿಂದ 63ನೆಯ ಹುಟ್ಟು ಹಬ್ಬದವರೆಗಿನ ಅವಧಿಯಲ್ಲಿ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

1. ವಿಶ್ವಗುರು ಬಸವಣ್ಣನವರನ್ನು ಕುರಿತಾದ ರಾಜ್ಯಮಟ್ಟದ, ರಾಷ್ಟ್ರಮಟ್ಟದ ಪ್ರಬಂಧ ಸ್ಪರ್ಧೆ, ಅಂತರ ಕಾಲೇಜು, ಅಂತರ ವಿಶ್ವವಿದ್ಯಾಲಯದ ಮಟ್ಟದ ಉಪನ್ಯಾಸ ಸ್ಪರ್ಧೆ ಏರ್ಪಡಿಸುವುದು.

2. ಪೂಜ್ಯ ಸ್ವಾಮೀಜಿಯವರ ಬಾಲ್ಯ, ವಿದ್ಯಾಭ್ಯಾಸ. ಬದುಕು, ಸಂಚಾರ, ಸಾಧನೆ ಕುರಿತಾದ ಸಾಕ್ಷ್ಯಚಿತ್ರವೊಂದನ್ನು ತಯಾರಿಸುವುದು.

3. ರಾಷ್ಟ್ರೀಯ ಬಸವ ದಳಗಳ ಶಾಖೆಯನ್ನು ತೆರೆದು, ಪ್ರಾರ್ಥನಾ ಕಾರ್ಯಕ್ರಮಗಳನ್ನು ನಡೆಸಲು ವ್ಯವಸ್ಥೆ ಮಾಡುವುದು. ಇತ್ಯಾದಿ.

ಸಹಕರಿಸಲು ಕೋರಿಕೆ

ಶರಣ ಬಂಧುಗಳೇ,

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿ ಅಭಿನಂದನಾ ಸಮಿತಿಯು ಹಮ್ಮಿಕೊಂಡಿರುವ ಈ ಯೋಜನೆ-ಕಾರ್ಯಕ್ರಮಗಳನ್ನು ಪೂರೈಸಲು ಉದಾರವಾದ ಧನ ಸಹಾಯವು ಬೇಕಲ್ಲವೆ ? ಆದ್ದರಿಂದ ತಾವು ಉದಾರ ಮನಸ್ಸಿನಿಂದ ಮುಂದೆ ಬರಬೇಕಾಗಿ ಕೋರುತ್ತೇವೆ.

1.	ಮಹಾಪೋಷಕರು	5000 ರೂ.	ಮತ್ತು ಮೇಲೆ ಕೊಟ್ಟವರು
2.	ದಾನಿಗಳು	1000 ರೂ.	,,
3.	ಹಿತೈಷಿಗಳು	500 ರೂ.	,,
4.	ಅಭಿಮಾನಿಗಳು	250 ರೂ.	,,

ಇನ್ನು ಅವರವರ ಶಕ್ತ್ಯಾನುಸಾರ ಕಾಣಿಕೆಗಳನ್ನು 101 ರಿಂದ 250ರೂಗಳವರೆಗೆ ಕೊಡಬಹುದು.

ವಿವಿಧ ಯೋಜನೆಗಳಿಗೆ :

1. ಯೂ ಮ್ಯಾಟಿಕ್ ವೀಡಿಯೋ ಕೆಸೆಟ್ಟು ಮಾಡುತ್ತಿರುವುದರಿಂದ ಉಪನ್ಯಾಸದ ಒಂದು ಕೆಸೆಟ್ಟಿಗೆ, ಅಂದರೆ ಮಾತೃಸುರಳಿ ಮಾಡಲು 6000/- ರೂಪಾಯಿ ವೆಚ್ಚ ಬರುತ್ತಿದೆ. ಈ ಉದ್ದೇಶಕ್ಕೆಂದು ಒಬ್ಬರೇ ಪೂರ್ತಿ ಹಣ ಕೊಟ್ಟರೆ, ಕೆಸೆಟ್ಟು ಆರಂಭದಲ್ಲಿಯೇ ದಾನಿಗಳ ಹೆಸರನ್ನು ತೋರಿಸಲಾಗುವುದು. 3000/- ರೂ ಕೊಟ್ಟರೆ ಇಬ್ಬರ ಹೆಸರನ್ನು ಪ್ರಾರಂಭದಲ್ಲಿ, ನಡುವಿನಲ್ಲಿ ತೋರಿಸಲಾಗುವುದು: ವೀಡಿಯೋ ಕೆಸೆಟ್ಟು ತಯಾರಿಕೆಗೆ ಎಂದು ಕನಿಷ್ಠ 1000/-ರೂದಂತೆ ಯಾರು ಕೆ[illegible]ರೋ, ಅವರ ಹೆಸರುಗಳನ್ನು ಸಮಯದ ಆಧಾರದ ಮೇಲೆ ವರ್ಗೀಕರಿಸಿ ತೋರಿಸಲಾಗುವುದು.

2. ಪ್ರವಚನಗಳ ವಿಶೇಷ ವಿಷಯಗಳನ್ನು ಆಯ್ದುಕೊಂಡು, ಒಂದೊಂದು ಗಂಟೆಯ (C-60) ಎರಡು ಕೆಸೆಟ್ಟುಗಳನ್ನು ಒಂದೊಂದು ವಿಷಯ ಕುರಿತಂತೆ ಸಿದ್ಧಪಡಿಸಲಾಗುವುದು. ಒಂದು ಗಂಟೆ ಆಡಿಯೋ ಕೆಸೆಟ್ಟಿನ ಮಾತೃಸುರಳಿ (Mother-Tape) ಸಿದ್ಧಪಡಿಸಲು 1500/- ರೂ ಬೇಕಾಗುತ್ತದೆ. ಆದ್ದರಿಂದ ದಾನಿಗಳು 1500/- ರೂದಂತೆ ಕೊಟ್ಟರೆ ಕೆಸೆಟ್ಟಿನ ಹೊದ್ದಿಕೆಯ ಮೇಲೆ ದಾನಿಗಳ ಹೆಸರನ್ನು ಮುದ್ರಿಸಲಾಗುವುದು. ಮತ್ತು ಕೆಸೆಟ್ಟಿನ ಉಚಿತ ಪ್ರತಿ ನೀಡಲಾಗುವುದು. ಒಂದು ಉಪನ್ಯಾಸವು 2 ಗಂಟೆ ಕಾಲ ಧ್ವನಿ ಮುದ್ರಣಗೊಳ್ಳುವುದರಿಂದ ದಾನಿಗಳು ಪೂರ್ತಿ ವಿಷಯಕ್ಕೆ ತಮ್ಮ ಹೆಸರಿರಲಿ ಎನ್ನುವುದಾದರೆ 3000/- ರೂಗಳನ್ನು, ಒಂದೇ ಕೆಸೆಟ್ಟಿಗಾದರೆ 1500/- ರೂಗಳನ್ನು ಕೊಡಬಹುದು.

3. ಧರ್ಮ ಪ್ರಚಾರಕರ ನಿಧಿಗೆ 1001/- ರೂ ಕೊಡಬಹುದು.

4. ಪೂಜ್ಯ ಶ್ರೀಗಳ 61 ನೆಯ ಹುಟ್ಟು ಹಬ್ಬದ ನಿಮಿತ್ತ, ಸಂಸ್ಥೆಗೆ ಉಪಯೋಗವಾಗುವ ವಸ್ತುಗಳ ರೂಪದಲ್ಲಿಯೂ, ತಮ್ಮ ತಮ್ಮ ಊರುಗಳ, ಸಂಘ ಸಂಸ್ಥೆಗಳ ನೆನಪಿರುವಂತೆ ಕೊಡುಗೆಗಳನ್ನು ಕೊಡಲು ಅವಕಾಶ ಉಂಟು.

80 ಜಿ ಇನ್‌ಕಮ್ ಟ್ಯಾಕ್ಸ್ ರಿಯಾಯಿತಿಯ ಸೌಲಭ್ಯ

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಸಹ ಈ ಗೌರವಾರ್ಪಣೆಯ ಕಾರ್ಯದಲ್ಲಿ ಭಾಗಿಯಾಗುತ್ತಲಿದ್ದು, ಇದು 500/-ರೂ ಮೀರಿದ ಮೇಲಿನ ಯಾವುದೇ ದೇಣಿಗೆಯನ್ನು ಕೊಡುವವರಿಗೆ 80 ಜಿ ರಿಯಾಯಿತಿ ಸೌಲಭ್ಯವನ್ನು ಒದಗಿಸುತ್ತದೆ. ಈ ಸೌಲಭ್ಯ ಪಡೆದುಕೊಳ್ಳಬೇಕು ಎನ್ನುವವರು, Basava Mahamane Charitable Trust, Bangalore ಹೆಸರಿಗೆ ಬ್ಯಾಂಕ್ ಡ್ರಾಫ್ಟ್/ಚೆಕ್ಕು/ನಗದು ಕಳಿಸಬಹುದು. ಆ ರಸೀತಿಯನ್ನು ದಾನಿಗಳಿಗೆ ಕೊಡಲಾಗುವುದು.

ವಿ. ಸೂ : ಕವರಿನ ಮೇಲೆ ಪೂರ್ಣ ವಿಳಾಸವನ್ನು ಅಚ್ಚುಕಟ್ಟಾಗಿ ಸ್ಪಷ್ಟವಾಗಿ ಬರೆಯಿರಿ.

ಪ್ರಸ್ತುತ ಕಾರ್ಯಕ್ರಮದಲ್ಲಿ ತಾವೆಲ್ಲರೂ ಭಾಗವಹಿಸಿ, ಹೃತ್ಪೂರ್ವಕ ಸಹಕಾರ ನೀಡುವಿರಾಗಿ ನಂಬಿದ್ದೇವೆ.

ಪೂಜ್ಯ ದಯಾನಂದ ಸ್ವಾಮೀಜಿ	ಶರಣ. ಪುಟ್ಟರುದ್ರಪ್ಪ	ಶರಣ. ನಿಜಗುಣಾನಂದಸ್ವಾಮಿ
ಪ್ರಧಾನ ಸಂಚಾಲಕರು	ಪ್ರಧಾನ ಕಾರ್ಯದರ್ಶಿ	ಸಹ- ಕಾರ್ಯದರ್ಶಿ

ವ್ಯವಹಾರಕ್ಕೆ ವಿಳಾಸ : ದೂರವಾಣಿ : 325335

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿ
ಅಭಿನಂದನಾ ಸಮಿತಿ
ಬಸವ ಮಂಟಪ, 2035, 2ನೆಯ ಬ್ಲಾಕ್, 20 ನೇ ಮುಖ್ಯರಸ್ತೆ,
ಕಾರ್ಡ್‌ರಸ್ತೆ, ರಾಜಾಜಿನಗರ, ಬೆಂಗಳೂರು-560010

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಮಹಾಸ್ವಾಮಿಗಳ
ಅಭಿನಂದನ ಕಾರ್ಯಕ್ರಮ

ಅಪೂರ್ವ ವಾಗ್ಮಿ, ಕ್ರಾಂತಿಕಾರಿ ಧರ್ಮ ಪ್ರಚಾರಕ, ಪ್ರವಚನ ಪಿತಾಮಹ.

ಪೂಜ್ಯ ಶ್ರೀ ಶ್ರೀ ಸದ್ಗುರು ಲಿಂಗಾನಂದ ಮಹಾಸ್ವಾಮೀಜಿ

ಅವರಿಗೆ, 60 ವರ್ಷಗಳು ತುಂಬುತ್ತಲಿರುವ ನಿಮಿತ್ತ
ಅಭಿನಂದನ ಸಮಾರಂಭವೊಂದನ್ನು ಏರ್ಪಡಿಸಲಾಗಿದೆ.

ದಿನಾಂಕ. 27-10-1991, ಭಾನುವಾರ

ಸ್ಥಳ : ರವೀಂದ್ರ ಕಲಾಕ್ಷೇತ್ರ, ಬೆಂಗಳೂರು.

ಸಮಯ : ಬೆಳಿಗ್ಗೆ, 9 ರಿಂದ 1

ಕಾರ್ಯಕ್ರಮದ ವಿವರಗಳನ್ನೊಳಗೊಂಡ ಆಹ್ವಾನ ಪತ್ರಿಕೆಯನ್ನು ಪ್ರತ್ಯೇಕವಾಗಿ ಮುದ್ರಿಸಲಾಗುವುದು.

KALYANA KIRANA- Monthly magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod, Bangalore-560 074.

ಕುಂಬಳಗೋಡಿನ ಬಸವ ಗಂಗೋತ್ರಿಯಲ್ಲಿ ಬಸವ ತತ್ತ್ವ ತರಬೇತಿ ಶಿಬಿರ

ಪ್ರತಿವರ್ಷದಂತೆ ಬೆಂಗಳೂರು ದಕ್ಷಿಣ ತಾಲ್ಲೋಕು, ಕೆಂಗೇರಿ ಆಚೆಗಿರುವ ಕುಂಬಳಗೋಡಿನ ಬಳಿಯ ಬಸವ ಗಂಗೋತ್ರಿಯಲ್ಲಿ ಬಸವ ತತ್ತ್ವ ತರಬೇತಿ ಶಿಬಿರವು ನಡೆಯುತ್ತಲಿದ್ದು, ದಿ. 13-10-1991 ರಿಂದ 26-10-1991 ರ ವರೆಗೆ ನಡೆಯಲಿದೆ. ಭಕ್ತಿ ಪಕ್ಷ ಸಮ್ಮೇಳನ ಮತ್ತು ಬಸವ ಧರ್ಮ ಸಂಸತ್ ಸದಸ್ಯರ ಸಭೆಯು ದಿ. 25, 26 ರಂದು ನಡೆಯುತ್ತವೆ. 26 ರಂದು ಶಿಬಿರದ ಸಮಾರೋಪವು ಇರುತ್ತದೆ. 27-10-1991 ರಂದು ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರ ಅಭಿನಂದನ ಕಾರ್ಯಕ್ರಮವು, ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿದೆ.

ಶುಲ್ಕ ವಿವರ

1. ದಿ. 13-10-1991 ರಿಂದ 27-10-1991 ರ ವರೆಗಿನ ಊಟ ವಸತಿಯ ಶುಲ್ಕ 150-00ರೂ
2. ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ರಿಯಾಯಿತಿಯಿದ್ದು, 100 ರೂ ಇದೆ.
3. ಭೃತ್ಯಾಚಾರ ಗಣದ ಸದಸ್ಯರಾಗಿ ಮುಂದೆ ಕಾರ್ಯಕರ್ತರಾಗುವವರಿಗೆ ಉಚಿತ ಪ್ರವೇಶವಿದೆ.
4. ಆರ್ಥಿಕ ಅನಾನುಕೂಲತೆಯಿದ್ದು, ಬಸವ ತತ್ತ್ವವನ್ನು ತಿಳಿದುಕೊಳ್ಳುವ ಆಸಕ್ತಿ ಇರುವವರಿಗೆ ಉಚಿತ ಪ್ರವೇಶವಿದೆ. ಅವರು ಮೊದಲೇ ಪತ್ರ ಬರೆದು ಅನುಮತಿ ಪಡೆದುಕೊಳ್ಳಬೇಕು.

ಭಕ್ತಿ ಪಕ್ಷ ಸಮ್ಮೇಳನಕ್ಕೆ ಮಾತ್ರ ಬರುವವರಿಗೆ ಊಟ ವಸತಿಗಳ ಶುಲ್ಕ 40-00. ರೂಗಳು.

ವಿಶೇಷ ಸೂಚನೆ : (೧) ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರ ಅಭಿನಂದನ ಕಾರ್ಯಕ್ರಮಕ್ಕೆ ಸ್ವಯಂ ಪ್ರೇರಣೆಯಿಂದ ಕಾಣಿಕೆಗಳನ್ನು ಕಳಿಸಬಹುದು.

೨. ತಮ್ಮ ತಮ್ಮ ಕೈಲಾದಷ್ಟು ಕಾಣಿಕೆಯನ್ನು ಸಂಗ್ರಹಿಸಿಕೊಡಬೇಕೆನ್ನುವ ಸದ್ಭಕ್ತರು ಬೆಂಗಳೂರಿನ ಬಸವ ಮಂಟಪದ ವಿಳಾಸಕ್ಕೆ ಪತ್ರ ಬರೆದು, ರಸೀತಿ ಪುಸ್ತಕ ಮತ್ತು ವಿಶೇಷ ಮಾಹಿತಿ ಪತ್ರ ತರಿಸಿಕೊಳ್ಳಬಹುದು.

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿ, ಅಭಿನಂದನಾ ಸಮಿತಿ
ಬಸವ ಮಂಟಪ, 2035, 2ನೇಬ್ಲಾಕ್, ಕಾರ್ಡ್ ರಸ್ತೆ, ರಾಜಾಜಿನಗರ, ಬೆಂಗಳೂರು-560010


ಶರಣ ಬಂಧುಗಳೇ,

ಪೂಜ್ಯ ಸದ್ಗುರುಗಳ ಪ್ರವಚನ ಆಡಿಯೋ, ವಿಡಿಯೋ, ಕೆಸೆಟ್ಟು ರೆಕಾರ್ಡಿಂಗ್ ಮುಗಿದಿದ್ದು ಈಗ ಎಡಿಟಿಂಗ್ ಹಂತದಲ್ಲಿದೆ. ಆಡಿಯೋ ಕೆಸೆಟ್ಟಿಗೆ 1500 ರೂದಂತೆ, ವೀಡಿಯೋ ಕೆಸೆಟ್ಟಿಗೆ 1000-00 ದಂತೆ ಹಣ ಕಳಿಸಲು ಸಮಯಾವಕಾಶವಿದೆ. ಎಂಬುದನ್ನು ದಾನಿಗಳ ಗಮನಕ್ಕೆ ತರಲು ಇಚ್ಛಿಸುತ್ತೇವೆ.

—ಮಾತಾಜಿ

ಗುರುಕಾರುಣ್ಯವೇ ಸದಾಚಾರ, ಗುರುಕಾರುಣ್ಯವೇ ಶಿವಾಚಾರ,
ಗುರುಕಾರುಣ್ಯವೇ ಪ್ರಸಾದ ರುಚಿ
ಮುಂದೆ ಗುರು, ಹಿಂದೆ ಲಿಂಗ ಕೂಡಲ ಸಂಗಮದೇವಾ

ಕಲ್ಯಾಣ ಕಿರಣ KRNB 312/B 92 SEPTEMBER 1991



ಸರಳತೆಯ ಸಾಕಾರ, ನಗೆಮುಖದ ಜ್ಞಾನವೀರ

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿ

ಸದ್ಗುರು ಚರಣಕೆ ಶುಭನಮನ

ವರುಷ ಅರವತ್ತೊಂದು ನಲಿಯುತ್ತ ಬಂದಿರಲು
ಪರುಷಮಯ ದೈವೀಜೀವನವ ತಾವ್ ಹೊಂದಿರಲು
ಚರಿಪ ದೀಪ್ತಿಯೊಲು ಭಕ್ತರಿಗೆ ಬೆಳಕಾಗಿರಲು
ಭಕ್ತಿ ಸೌರಭ ಬೆರೆದ ಶರಣು–ಶರಣಾರ್ಥಿ